Swabhimani Sahakari
Pages - 28, ₹12
Volume -14
Issue - 03
March - 2017

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಅಂತರರಾಷ್ಟ್ರೀಯ ಮಹಿಳಾ ದಿನ 8

"ಹಳೆಯದಲ್ಲವ ಮರೆಯಿರೈ
ಹೊಸತು ಬಾಳ ತೆರೆಯಿರೈ
ಮುಪ್ಪು ಹರೆಯ ಮರೆಯುತ
ಬೆಪ್ಪು - ಜಾಣ ಬೆರೆಯುತ
ಲಗ್ಗೆ - ಚೆಂಡು, ಚಿಣ್ಣಿದಾಂಡು
ಏಣಿ ಉಯ್ಯಾಲೆ ಆಡಿರೈ"

– ಪು.ತಿ.ನರಸಿಂಹಾಚಾರ್

29 ಚಾಂದ್ರಮಾನ ಯುಗಾದಿ

12 ಹೋಳಿ

ಅಂತರರಾಷ್ಟ್ರೀಯ ಮಹಿಳಾ ದಿನ,
ಹೋಳಿ,
ಚಾಂದ್ರಮಾನ ಯುಗಾದಿಯ
ಹಾರ್ದಿಕ
ಶುಭಾಶಯಗಳು

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು

> ಕೆಲವು ಸಹಕಾರಿಗಳಲ್ಲಿ ತಮ್ಮ ಸಿಬ್ಬಂದಿಯವರನ್ನು ತರಬೇತಿಗಳಿಗೆ ಕಳುಹಿಸುವುದಿಲ್ಲ. ಆಡಳಿತ ಮಂಡಲಿಯವರು ತಮ್ಮ ತಮ್ಮ ಶಿಫಾರಸ್ಸಿನ ಮೇರೆಗೆ ನೇಮಿಸಿಕೊಂಡಿರುವ ಈ ಸಿಬ್ಬಂದಿಯವರಿಗೆ ಸಹಕಾರಿಯ ಕಾರ್ಯಚಟುವಟಿಕೆಗಳ ಮಾಹಿತಿ ಇರುವುದಿಲ್ಲ. ಹೀಗಾಗಿ ಕೆಲಸ ಕಾರ್ಯಗಳಿಗೆ ಅಗತ್ಯವಾದ ಮಾಹಿತಿ ಇರದೇ, ಪಡೆಯದೇ ಕಾರ್ಯನಿರ್ವಹಿಸುವುದರಿಂದ ನಿರೀಕ್ಷಿಸಿದ ಮಟ್ಟಕ್ಕೆ ಕೆಲಸ ಕಾರ್ಯಗಳು ನೆರವೇರದಿರುವುದನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ.

ಸಹಕಾರಿಗಳ ಸಿಬ್ಬಂದಿಗಳಿಗೆ ಕೌಶಲ್ಯ ಹಾಗೂ ಸದಾಚಾರ ಸಂಸ್ಕೃತಿ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ನಮ್ಮಲ್ಲಿ ಮನೆ ಮಾಡಿರುವ ಕಾಮವನ್ನು ಸುಟ್ಟು ಹಾಕುವ ರಂಗು ರಂಗಿನ ಹೋಳಿ ಹಬ್ಬ, ಹೊಸ ವರುಷಕೆ ಹೊಸ ಹರುಷವ ತರುವ ಯುಗಾದಿ ಹಬ್ಬ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು. ಮಾರ್ಚ್ 31ಕ್ಕೆ ಸಹಕಾರಿಯ ಲಾಭವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಯೋಜನೆಗಳನ್ನು ಪೂರ್ಣಗೊಳಿಸುವ, ಅದರಲ್ಲೂ ವಿಶೇಷವಾಗಿ ಸಾಲಗಳು ಬಾಕಿ ಉಳಿಯದಂತೆ ವಸೂಲಾತಿ ಕ್ರಮವಿಟ್ಟ ನಂತರ ವರ್ಷದ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವ ಮಹತ್ವದ ಹಂತದಲ್ಲಿ ತಾವೆಲ್ಲಾ ತೊಡಗಿಸಿಕೊಂಡಿದ್ದೀರಿ. ತಮ್ಮ ಯೋಜನೆಗಳೆಲ್ಲಾ ಯಶಸ್ವಿಯಾಗಿ ನೆರವೇರಲಿ, ನಿರೀಕ್ಷಿಸಿದ ಫಲಿತಾಂಶ ತಮ್ಮದಾಗಲಿ, ಸಹಕಾರಿಗಳೆಲ್ಲ ಉತ್ತಮ ಲಾಭ ಗಳಿಸಲಿ ಎಂದು ಹಾರೈಸುತ್ತೇನೆ.

ಮಾನ್ಯ ಸಹಕಾರಿಗಳೇ, ರಾಜ್ಯದಲ್ಲಿ 3960 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 50000ಕ್ಕೂ ಹೆಚ್ಚು ಸಿಬ್ಬಂದಿಯವರು ನೇರವಾಗಿ ಅಥವಾ ಇದಕ್ಕೆ ಸಂಬಂಧಿಸಿದಂತೆ ಕೆಲಸದಲ್ಲಿದ್ದಾರೆ. ಇವರುಗಳಿಗೆ ವಿವಿಧ ರೀತಿಯ ತರಬೇತಿಗಳನ್ನು ಸಂಯುಕ್ತ ಸಹಕಾರಿಯು ನೀಡುತ್ತಾ ಬಂದಿದೆ. ಇನ್ನೂ ಕೆಲವು ದೊಡ್ಡ ಪ್ರಮಾಣದ ಸಹಕಾರಿಗಳಲ್ಲಿ ಅವರದೇ ಆದ ತರಬೇತಿ ವಿಭಾಗವನ್ನು ಮಾಡಿಕೊಂಡು ವಿವಿಧ ರೀತಿಯ ತರಬೇತಿಗಳನ್ನು ನೀಡುವ ವ್ಯವಸ್ಥೆ ಇದೆ.

ಆದರೆ, ಕೆಲವು ಸಹಕಾರಿಗಳಲ್ಲಿ ತಮ್ಮ ಸಿಬ್ಬಂದಿಯವರನ್ನು ತರಬೇತಿಗಳಿಗೆ ಕಳುಹಿಸುವುದಿಲ್ಲ. ಆಡಳಿತ ಮಂಡಲಿಯವರು ತಮ್ಮ ತಮ್ಮ ಶಿಫಾರಸ್ಸಿನ ಮೇರೆಗೆ ನೇಮಿಸಿಕೊಂಡಿರುವ ಈ ಸಿಬ್ಬಂದಿಯವರಿಗೆ ಸಹಕಾರಿಯ ಕಾರ್ಯಚಟುವಟಿಕೆಗಳ ಮಾಹಿತಿ ಇರುವುದಿಲ್ಲ. ಹೀಗಾಗಿ ಕೆಲಸ ಕಾರ್ಯಗಳಿಗೆ ಅಗತ್ಯವಾದ ಮಾಹಿತಿ ಇರದೇ, ಪಡೆಯದೇ ಕಾರ್ಯನಿರ್ವಹಿಸುವುದರಿಂದ ನಿರೀಕ್ಷಿಸಿದ ಮಟ್ಟಕ್ಕೆ ಕೆಲಸ ಕಾರ್ಯಗಳು ನೆರವೇರದಿರುವುದನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ. ಸಂಯುಕ್ತ ಸಹಕಾರಿಯು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗೆ ತರಬೇತಿ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಜೊತೆಗೆ ಎಲ್ಲರೂ ಕೌಶಲ್ಯಭರಿತರಾಗಿ ಮತ್ತು ಸದಾಚಾರ ಸಂಸ್ಕೃತಿ ಸಂಪನ್ನರಾಗಿ ಕಾರ್ಯನಿರ್ವಹಿಸಬೇಕೆಂದು ಅಪೇಕ್ಷಿಸುತ್ತದೆ.

ಸಹಕಾರಿಗಳ ಸಿಬ್ಬಂದಿಯವರು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಮತ್ತು ನನ್ನ ಸಂಸ್ಥೆ ಏನು, ನನ್ನ ಪಾತ್ರ ಏನು, ಸಹಕಾರ ಕ್ಷೇತ್ರ ಎಂದರೇನು, ಲೆಕ್ಕಪತ್ರಗಳು ಹೇಗಿರುತ್ತವೆ, ಆಡಳಿತ ವ್ಯವಸ್ಥೆ ಹೇಗಿರಬೇಕು, ಆಧುನಿಕ ತಂತ್ರಜ್ಞಾನದ ಬಳಕೆ ಹೇಗೆ, ಸಹಕಾರಿ ಪರಿಸರ ಹೇಗಿದೆ, ಸಾರ್ವಜನಿಕ ಸಂಪರ್ಕ ಹೇಗಿರಬೇಕು ಮುಂತಾದ ಅನೇಕ ವಿಷಯಗಳನ್ನು ಅಧ್ಯಯನ ಮಾಡಿದಾಗ ಅವರ ಕೌಶಲ್ಯವು ವರ್ಧಿಸುತ್ತದೆ. ಅವರಲ್ಲಿ ಒಂದು ಸದಾಚಾರದ ಸಂಸ್ಕೃತಿ ಬೆಳೆಯಲು ಅವಕಾಶವಾಗುತ್ತದೆ. ಇವೆಲ್ಲವುಗಳ ಬಗ್ಗೆ ಜ್ಞಾನ ವೃದ್ಧಿಸಿಕೊಂಡಾಗ ಸಹಕಾರಿಯ ಕೆಲಸದಲ್ಲಿ ವೃತ್ತಿಪರತೆಯನ್ನು ಹಾಗೂ ಪಾರದರ್ಶಕತೆಯನ್ನು ಅಳವಡಿಸಿಕೊಂಡು ದಕ್ಷತೆಯಿಂದ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಈ ಕಾರ್ಯದಲ್ಲಿ ಪಾಲ್ಗೊಳ್ಳಬೇಕೆಂದು ತಾವುಗಳೆಲ್ಲ ಕೈಜೋಡಿಸಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಈ ವಿಚಾರದಲ್ಲಿ ತಮ್ಮ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಸ್ವಾಗತಿಸುತ್ತೇನೆ.

ಹೆಚ್.ವಿ.ರಾಜೀವ, ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಹೆಚ್.ವಿ.ರಾಜೀವ
ಗೌರವ ಅಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ 4
ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ "ಕೌಶಲ್ಯ ಅಭಿವೃದ್ಧಿ ಹಾಗೂ ಸದಾಚಾರ ತರಬೇತಿ" 5
ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ ತರಬೇತಿ ಕಾರ್ಯಕ್ರಮ 8
ಸುಸ್ತಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ತರಬೇತಿ 9
ಮಾರ್ಚ್ ಮಾಹೆಯ ತರಬೇತಿ ಕಾರ್ಯಕ್ರಮಗಳು 14
ಸಹಕಾರ ಸಂಸ್ಥೆಗಳಲ್ಲಿ ಡಿಜಿಟಲ್ ಬ್ಯಾಂಕಿಂಗ್ ಅಗತ್ಯತೆ ಮತ್ತು ಬದಲಾವಣೆಯ ಪರ್ವಕ್ಕೆ ಸಿದ್ಧತೆ 19
ಗುಣಾತ್ಮಕ ಸಾಲ ನೀಡುವಿಕೆಯಿಂದ ಸಹಕಾರಿ ನಷ್ಟ ತಡೆಯಲು ಸಾಧ್ಯ 22
ಭಾರತದಲ್ಲಿ ಸ್ತ್ರೀಯ ಸ್ಥಾನಮಾನ ಮತ್ತು ಕಾನೂನಿನಲ್ಲಿರುವ ಸುರಕ್ಷತೆ 25

ಸಂಪಾದಕೀಯ

ನೋಟುಗಳ ಅಮಾನ್ಯತೆ - ನೋಟು ವಿನಿಮಯ - ಹಣಕಾಸು ವ್ಯವಹಾರಗಳ ಮುಖ್ಯ ವಾಹಿನಿಯಲ್ಲಿ ಸಹಕಾರ ಕ್ಷೇತ್ರದ ಅಸ್ತಿತ್ವ, ವಿಸ್ತಾರತೆ, ಸಾಧನೆಗಳಿಗೆ ಮಾನ್ಯತೆ ನೀಡದಿರುವುದು : ಸಹಕಾರಿಗಳ ಆತ್ಮಾವಲೋಕನ ಅವಶ್ಯಕ

ಸಹಕಾರ ಕ್ಷೇತ್ರದ ಮೂಲಕ ಅನೇಕರು ತಮ್ಮ ರಾಜಕೀಯ ಹಾಗೂ ಸಾರ್ವಜನಿಕ ಜೀವನ ಪ್ರಾರಂಭಿಸಿ, ದೇಶದ ರಾಜಕೀಯ ಪಕ್ಷಗಳ ಮೂಲಕ ಲೋಕಸಭಾ ಸದಸ್ಯರುಗಳಾಗಿದ್ದಾರೆ, ರಾಜ್ಯಸಭಾ ಸದಸ್ಯರುಗಳಾಗಿದ್ದಾರೆ, ಕೇಂದ್ರ ಹಾಗೂ ರಾಜ್ಯಗಳಲ್ಲಿ ಮಂತ್ರಿಗಳ ಸ್ಥಾನದಲ್ಲಿದ್ದಾರೆ, ಶಾಸಕರುಗಳಾಗಿದ್ದಾರೆ, ವಿಧಾನ ಪರಿಷತ್ ಸದಸ್ಯರುಗಳಾಗಿದ್ದಾರೆ, ಅನೇಕ ಪ್ರತಿಷ್ಠಿತ ಸ್ಥಾನಗಳಲ್ಲಿದ್ದಾರೆ, ತಾವು ಬೆಳೆದಿದ್ದಾರೆ, ಸಹಕಾರ ಸಂಸ್ಥೆಗಳನ್ನು ಕಟ್ಟಿದ್ದಾರೆ, ಬೆಳೆಸಿದ್ದಾರೆ, ಪರಿಣಾಮವಾಗಿ ದೇಶದಲ್ಲಿ 6 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು, 30 ಕೋಟಿಗೂ ಅಧಿಕ ಜನ ಸದಸ್ಯತ್ವ ಹಾಗೂ ಸಹಕಾರ ಕ್ಷೇತ್ರದ ಮೂಲಕ ಅನೇಕ ಸಾಧನೆಗಳು, ಸರಕಾರದ ಅನೇಕ ಯೋಜನೆಗಳ ಅನುಷ್ಠಾನದ ಹಾಗೂ ಸದಸ್ಯರ ಆರ್ಥಿಕ ಅಭಿವೃದ್ಧಿಯ ಸಾಧನ ಇದು ನಮ್ಮ ಹೆಗ್ಗಳಿಕೆ.

ಆದರೆ, ಈ ಸಹಕಾರಿ ಸಂಸ್ಥೆಗಳಿಗೆ ನವೆಂಬರ್ 8, 2016 ರಂದು ನಡೆದ ರೂ.500 ಹಾಗೂ ರೂ.1000 ನೋಟುಗಳ ಅಮಾನ್ಯತೆ ಸಂದರ್ಭದಲ್ಲಿ ನೋಟುಗಳ ವಿನಿಮಯಕ್ಕಾಗಿ ಹಣಕಾಸು ವ್ಯವಹಾರಗಳ ಮುಖ್ಯವಾಹಿನಿಯಲ್ಲಿ ಸಹಕಾರಿ ಸಂಸ್ಥೆಗಳನ್ನು ಸೇರ್ಪಡಿಸದಿರುವುದು ವಿಷಾದನೀಯ. ಇದಕ್ಕೆ ಅವರು ಕೊಟ್ಟಿರುವ ಮಹತ್ವದ ಕಾರಣಗಳನ್ನು ಸಹಕಾರಿಗಳು ಗಮನಿಸುವುದು ಬಹುಮುಖ್ಯ.

ಸಹಕಾರ ಕ್ಷೇತ್ರದಲ್ಲಿ ಲೆಕ್ಕಪತ್ರ ಪದ್ಧತಿಗಳು ಏಕರೂಪವಾಗಿಲ್ಲ, ಆಡಳಿತ ಪಾರದರ್ಶಕವಾಗಿಲ್ಲ, ಆಧುನಿಕ ತಂತ್ರಜ್ಞಾನದ ಬಳಕೆ ಇಲ್ಲ, ರಾಜಕೀಯ ಹಸ್ತಕ್ಷೇಪವಿದೆ, ಸಿಬ್ಬಂದಿಯವರಿಗೆ ತರಬೇತಿ ಇಲ್ಲ, ಆಡಳಿತ ಮಂಡಲಿ ಹಾಗೂ ಸಿಬ್ಬಂದಿಯವರಲ್ಲಿ ವೃತ್ತಿಪರತೆ ಇಲ್ಲ, ಶಾಸನಾತ್ಮಕ (ಕಾನೂನು ಹಾಗೂ ನಿಯಮಗಳ) ವಿಷಯಗಳನ್ನು ಹಾಗೂ ಸರಕಾರದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಿಲ್ಲ, ಕಾರ್ಯವ್ಯಾಪ್ತಿ ಸೀಮಿತವಾಗಿರುತ್ತದೆ. ಪರಿಣಾಮವಾಗಿ ಸಹಕಾರ ಕ್ಷೇತ್ರದಲ್ಲಿ ಹಣಕಾಸು ವ್ಯವಹಾರ ಸ್ಥಗಿತವಾಯಿತು, ಸದಸ್ಯರಿಗೆ ಸೇವೆ ಸಲ್ಲಿಸಲು ಸಹಕಾರ ಸಂಸ್ಥೆಗಳು ವಿಫಲವಾದವು, ಪ್ರಗತಿ ಕುಂಠಿತವಾಯಿತು, ವರ್ಷಾಂತ್ಯಕ್ಕೆ ಲಾಭಾಂಶವೂ ಕಡಿಮೆಯಾದರೆ ಅಚ್ಚರಿಯೇನಲ್ಲ. ಗಣ್ಯಾತೀಗಣ್ಯರು ಈ ಕ್ಷೇತ್ರದಲ್ಲಿದ್ದು, ಈ ಕ್ಷೇತ್ರಕ್ಕೆ ಇಷ್ಟು ದೊಡ್ಡ ಹೊಡೆತದಿಂದ ಈ ಕ್ಷೇತ್ರವನ್ನು ರಕ್ಷಿಸಲು ಸಾಧ್ಯವಾಗದಿರುವುದು ವಿಪರ್ಯಾಸ.

ಸಹಕಾರಿಗಳಿಗೆ ಆತ್ಮಾವಲೋಕನಕ್ಕೆ ಇಂತಹ ಸನ್ನಿವೇಶ ಬಿಟ್ಟರೆ ಬೇರೆ ಅವಕಾಶಗಳು ಇಲ್ಲ. ಈ ಎಲ್ಲಾ ವಿಷಯಗಳ ಬಗ್ಗೆ ದೇಶದ ಹಾಗೂ ರಾಜ್ಯಗಳ ಸಹಕಾರ ಕ್ಷೇತ್ರದ ಮುಂಚೂಣಿಯಲ್ಲಿರುವ ನಾಯಕರುಗಳು, ಸಂಬಂಧಿಸಿದವರ ಗಮನಕ್ಕೆ ತರುವ ಪ್ರಯತ್ನ ಮಾಡುವುದರ ಜೊತೆಗೆ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸರಕಾರಗಳ ಮುಕ್ತ ಮನಸ್ಸಿನ ಬೆಂಬಲ ಹಾಗೂ ಪ್ರೋತ್ಸಾಹಗಳನ್ನು ಪಡೆಯಲು ಪ್ರಯತ್ನಿಸುವುದು ಅಗತ್ಯ.

ಈಗ ಸಮಯ ಬಂದಿದೆ. ಆರ್ಥಿಕ ವರ್ಷ ಮುಗಿಯುತ್ತಾ ಬಂದಿದೆ. ಪ್ರಸಕ್ತ ಸಾಲಿನ ಪ್ರಗತಿಯನ್ನು ಗಮನಿಸಿ, ಮುಂದಿನ ವರ್ಷಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸಿ, ಪಟ್ಟಿ ಮಾಡಿ ಸಂಬಂಧಿಸಿದ ಸಂಸ್ಥೆಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದಿ, ಉತ್ತಮವಾಗಿ ಕಾರ್ಯನಿರ್ವಹಿಸೋಣ. ನಮ್ಮ ಅಸ್ತಿತ್ವದ ಗುರುತಿಸುವಿಕೆಯ ಬಗ್ಗೆ ಸಂಘಟಿತ ಹೋರಾಟವನ್ನು ಪ್ರಾರಂಭಿಸೋಣ. ರಾಜ್ಯ, ರಾಷ್ಟ್ರಗಳ ಮಟ್ಟದಲ್ಲಿ ಸಹಕಾರ ಕ್ಷೇತ್ರವನ್ನು ಭದ್ರಪಡಿಸುವ, ಉತ್ತಮ ಸ್ವಾಯತ್ತ ಸಹಕಾರಿ ಕಾಯ್ದೆಗಳನ್ನು ರಚಿಸುವ ರಾಜಕೀಯ ಹಾಗೂ ಸರಕಾರಗಳ ಹಸ್ತಕ್ಷೇಪದಿಂದ ದೂರ ಇರಿಸುವ ಪಾರದರ್ಶಕ ಹಾಗೂ ವೃತ್ತಿಪರ ಆಡಳಿತವನ್ನು ನೀಡುವ ನಿಟ್ಟಿನಲ್ಲಿ ಸಮರೋಪಾದಿಯಲ್ಲಿ ಒಗ್ಗಟ್ಟಿನ ಪ್ರಯತ್ನಗಳನ್ನು ಪ್ರಾರಂಬಿಸ ಬೇಕು, ಸಂಯುಕ್ತ ಸಹಕಾರಿಯು ಇದಕ್ಕೆ ಬದ್ಧವಾಗಿದೆ. ಇದೆಲ್ಲ ಸಾಧ್ಯವಾದರೆ ಮಾತ್ರ ಸಹಕಾರ ಕ್ಷೇತ್ರದ ಅಭಿವೃದ್ಧಿ ಸಾಧ್ಯವಾದೀತು.

ಜ್ಞಾನ ಜ್ಯೋತಿ

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

ಉದಾಸೀನತೆ ನೆಮ್ಮದಿಯ ಜೀವನಕ್ಕೆ ಮೆಟ್ಟಲು

ಉದಾಸೀನತೆ ಭಕ್ತಿಯ ಮಾರ್ಗದಲ್ಲಿ ಒಂದು ದೊಡ್ಡ ಸಾಧನೆ. ಆಧ್ಯಾತ್ಮ ಎಂದರೆ (kind of experiment) ಒಂದು ರೀತಿಯ ಪ್ರಯೋಗ. ಇದರಿಂದ ಜೀವನದ ಸಮಸ್ಯೆಗಳು ಪರಿಹಾರವಾಗುತ್ತವೆ. ಪ್ರತಿಕೂಲ ವಿಷಯ ವಸ್ತುಗಳಲ್ಲಿ ಉದಾಸೀನ, ಅನುಕೂಲ ವಿಷಯ ಹಾಗೂ ವಸ್ತುಗಳಲ್ಲಿ ತತ್ಪರತೆ. ಆಗ ಮನಸ್ಸಿನಲ್ಲಿ ಭಕ್ತಿ ತುಂಬಿಕೊಳ್ಳುತ್ತದೆ. ಜಗತ್ತಿನಲ್ಲಿ ಎಲ್ಲವೂ ನಡೆಯುತ್ತದೆ. ಆನನವನ್ನು ಅಪೇಕ್ಷಿಸಿದಂತೆ ಮರಣವನ್ನು ಉಪೇಕ್ಷಿಸಬೇಕು. ಬದುಕಿನಲ್ಲಿ ಶಾಂತಿ ಸಮಾಧಾನ ಸಂತೋಷ ಬೇಕಾದರೆ ಒಂದಿಷ್ಟು ಉದಾಸೀನತೆ ಬೇಕು. ದಿನ ಗಿಡದಿಂದ ಎಲೆಗಳು ಬೀಳುತ್ತಲೇ ಇರುತ್ತವೆ. ನಾವು ಚಿಂತೆ ಮಾಡೋದು ಏನಿದೆ? ಉದಾಸೀನವಾಗಿರುವುದು ಶಾಂತಿಯನ್ನು ನೀಡುತ್ತದೆ. ಮನೆಯೊಳಗೆ ಶಾಂತಿಯನ್ನು ಇರಿಸಲು ಪ್ರಯತ್ನಿಸುವುದು, ತಿದ್ದುವುದು ಆಗಲಿಲ್ಲ ಎಂದರೆ ಸುಮ್ಮನಿರುವುದು ಉದಾಸೀನತೆ. ತಲೆ ಬೆಳ್ಳಗೆ ಆದ ಮೇಲೆ ಎಷ್ಟು ಕಪ್ಪು ಬಣ್ಣ ಹಚ್ಚಿದರೂ ಮತ್ತೆ ಕೂದಲು ಬೆಳ್ಳಗಾಗುತ್ತಲೇ ಇರುತ್ತವೆ. ಮತ್ತೆ ಕಪ್ಪು ಹಚ್ಚೋದು ಮತ್ತೆ ಬೆಳ್ಳಗೆ ಆಗೋದು ಇದೆಲ್ಲ ಏಕೆ? ಇದರಿಂದ ತಾಪ ಹೆಚ್ಚುತ್ತದೆ. ಉದಾಸೀನ ಮಾಡಿದರೆ ಜೀವನದ ಸಮಸ್ಯೆಗಳು ಕಡಿಮೆಯಾಗಿ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗುತ್ತದೆ.

ಗುರುನಾಥ ಜಾಂತಿಕರ ರಾಜೀನಾಮೆ

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ದಿನಾಂಕ : 06–02–2017ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುತ್ತಾರೆ. ಶ್ರೀಯುತರ ರಾಜೀನಾಮೆಯು ಅಂಗೀಕೃತವಾಗಿದೆ. ನೂತನ ಅಧ್ಯಕ್ಷರ ಆಯ್ಕೆಯಾಗುವವರೆಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಅಧ್ಯಕ್ಷರ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಸೌಹಾರ್ದ ಸಹಕಾರಿಗಳು "ಬ್ಯಾಂಕ್" ಅಥವಾ "ಸಹಕಾರಿ ಬ್ಯಾಂಕಿಂಗ್" ಪದಗಳನ್ನು ಉಪಯೋಗಿಸುತ್ತಿರುವುದು ಬ್ಯಾಂಕಿಂಗ್ ಕಾಯ್ದೆಯ ಉಲ್ಲಂಘನೆ ವಿರುದ್ಧ ಕಠಿಣ ಕ್ರಮ ಆರ್.ಬಿ.ಐ.

ಆರ್.ಬಿ.ಐ.ನಿಂದ ಬ್ಯಾಂಕಿಂಗ್ ಲೈಸನ್ಸ್ ಪಡೆಯದ ತಮ್ಮ ಹೆಸರಿನ ಜೊತೆಗೆ ಮತ್ತು ಪ್ರಚಾರ ಮಾಧ್ಯಮಗಳಲ್ಲಿ ಇದು ಸಹಕಾರಿ ಬ್ಯಾಂಕಿಂಗ್ ಸಂಸ್ಥೆ (Bank or Cooperative Banking) ಎಂದು ಬರೆಯುವುದಾಗಲಿ ಅಥವಾ ಬ್ಯಾಂಕ್ ಎಂಬ ಪದವನ್ನು ಬಳಸುವುದು ಬ್ಯಾಂಕಿಂಗ್ ರೆಗ್ಯೂಲೇಶನ್ ಕಾಯ್ದೆಯ ಸ್ಪಷ್ಟ ಉಲ್ಲಂಘನೆ. ರಾಜ್ಯದ ಕೆಲವೇ ಕೆಲವು ಸೌಹಾರ್ದ ಸಹಕಾರಿಗಳು ಈ ಪದಗಳನ್ನು ಉಪಯೋಗಿಸುವುದನ್ನು ಆರ್.ಬಿ.ಐ. ಗಮನಿಸಿದೆ. ಇದಕ್ಕೆ ತಕ್ಷಣ ಎಚ್ಚರಿಕೆ ನೀಡಿ, ಸದರಿ ಪದಗಳನ್ನು ಉಪಯೋಗಿಸದಂತೆ ಕ್ರಮವಿಡಲು ದಿನಾಂಕ 15 ಫೆಬ್ರವರಿ 2017ರಂದು ಆರ್.ಬಿ.ಐ. ಅಧಿಕಾರಿಗಳಾದ ಶ್ರೀ ತೋಟಗಂ ಜಮಾಂಗ, ಪ್ರಧಾನ ವ್ಯವಸ್ಥಾಪಕರು, ಡಿಸಿಬಿಎಸ್, ಶ್ರೀ ಜೆ.ಕುಮಾರ, ಉಪಪ್ರಧಾನ ವ್ಯವಸ್ಥಾಪಕರು, ಶ್ರೀ ಎಮ್.ಬಿಶ್ವಾಸ, ಸಹಪ್ರಧಾನ ವ್ಯವಸ್ಥಾಪಕರು, ಡಿಸಿಬಿಎಸ್, ಶ್ರೀ ಜೋಷಿ, ಸಹಾಯಕ ವ್ಯವಸ್ಥಾಪಕರು, ಡಿಸಿಬಿಎಸ್ ಇವರುಗಳ ಉಪಸ್ಥಿತಿಯಲ್ಲಿ ನಡೆಸಿದ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ, ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಇವರುಗಳು ಭಾಗವಹಿಸಿದ ಸಭೆಯಲ್ಲಿ ತಿಳಿಸಿದ್ದಾರೆ.

ಸಂಯುಕ್ತ ಸಹಕಾರಿಯು ರಾಜ್ಯದಾದ್ಯಂತ ನಡೆಸುತ್ತಿರುವ ಎಲ್ಲಾ ವಿಧವಾದ ತರಬೇತಿ ಕಾರ್ಯಕ್ರಮಗಳಲ್ಲಿ ಈ ಬಗ್ಗೆ ತಿಳುವಳಿಕೆ ನೀಡುತ್ತಾ ಬಂದಾಗ್ಯೂ ಸಹ ಕೆಲವೇ ಕೆಲವು ಸೌಹಾರ್ದ ಸಹಕಾರಿಗಳು ಈ ರೀತಿ ಮಾಡುತ್ತಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಒಳ್ಳೆಯದಲ್ಲ ಮತ್ತು ಕಾನೂನು ಕ್ರಮ ಜರುಗಿಸಲು ಅವಕಾಶವಾಗುತ್ತದೆ ಎಂಬುದನ್ನು ಸೌಹಾರ್ದ ಸಹಕಾರಿಗಳು ಗಮನಿಸಬೇಕು.

ಆದ್ದರಿಂದ, ಸದರಿ ಸೌಹಾರ್ದ ಸಹಕಾರಿಗಳು ತಮ್ಮ ಹೆಸರಿನ ಜೊತೆಗೆ ಉಪಯೋಗಿಸುತ್ತಿರುವ ಅಥವಾ ಮಾಧ್ಯಮಗಳ ಮೂಲಕ ಪ್ರಚಾರ ಮಾಡುತ್ತಿರುವ ಸಹಕಾರ ಬ್ಯಾಂಕಿಂಗ್ ಅಥವಾ ಬ್ಯಾಂಕ್ (Cooperative Banking or Bank) ಪದಗಳನ್ನು ತಕ್ಷಣದಲ್ಲಿ ತೆಗೆದುಹಾಕಬೇಕು ಎಂದು ಈ ಮೂಲಕ ಸೂಚಿಸಲಾಗಿದೆ.

– ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ಸೌ.ಸಂ.ಸ.ನಿ.

ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ "ಕೌಶಲ್ಯ ಅಭಿವೃದ್ಧಿ ಹಾಗೂ ಸದಾಚಾರ ತರಬೇತಿ"

ಕೌಶಲ್ಯ ಅಭಿವೃದ್ಧಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕ – ಶ್ರೀ ಎಸ್.ಆರ್.ಸತೀಶ್‌ಚಂದ್ರ

ಚಿಕ್ಕಬಳ್ಳಾಪುರ : ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗಾಗಿ ದಿನಾಂಕ 11 ರಿಂದ 12 ಫೆಬ್ರವರಿ 2017ರವರೆಗೆ ನಂದಿ ಬೆಟ್ಟದಲ್ಲಿ ಏರ್ಪಡಿಸಿದ್ದ "ಕೌಶಲ್ಯ ಅಭಿವೃದ್ಧಿ ಹಾಗೂ ಸದಾಚಾರ ತರಬೇತಿ"ಯನ್ನು ಉದ್ಘಾಟಿಸಿದ ಕ್ಯಾಂಪ್ಕೋ ಸಹಕಾರ ಸಂಸ್ಥೆಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್. ಸತೀಶ್‌ಚಂದ್ರರವರು ಸಹಕಾರ ಕ್ಷೇತ್ರದ ಅಭಿವೃದ್ಧಿ ಸಹಕಾರಿಗಳ ಸಿಬ್ಬಂದಿಯವರ ಕಾರ್ಯಶೈಲಿಯನ್ನು ಅವಲಂಬಿಸಿದೆ. ಸಿಬ್ಬಂದಿಯವರುಗಳು ಚುರುಕಾಗಿದ್ದರೆ, ಅಪ್‌ಡೇಟ್ ಆಗಿದ್ದರೆ, ಕ್ರಿಯಾಶೀಲರಾಗಿದ್ದರೆ ಮಾತ್ರ ಸಹಕಾರಿಯ ಚಟುವಟಿಕೆಗಳು ವೇಗದಲ್ಲಿ ಸಾಗಲು ಸಾಧ್ಯವಾಗುತ್ತದೆ.

ವಿಶ್ವದ ವ್ಯವಹಾರಗಳು ಅತ್ಯಂತ ವೇಗವಾಗಿ ಸಾಗುತ್ತಿರುವಾಗ ಆ ವೇಗದಲ್ಲಿ ನಾವು ಓಡದಿದ್ದರೆ ನಾವು ಮುಗ್ಗರಿಸುತ್ತೇವೆ. ಪ್ರಗತಿ ಕುಂಠಿತವಾಗುತ್ತದೆ. ಇದರ ಜೊತೆಗೆ ಸದಾಚಾರ ಸಂಸ್ಕೃತಿ ಅತ್ಯಂತ ಮುಖ್ಯಪಾತ್ರವನ್ನು ವಹಿಸುತ್ತದೆ. ಹಸನ್ಮುಖಿಯಾಗಿ ಉತ್ಸಾಹದಿಂದ ಕಾರ್ಯನಿರ್ವಹಿಸುವಾಗ ಸಹಕಾರಿಗೆ ಬಂದವರೊಡನೆ, ಸಹಕಾರಿಯಲ್ಲಿ ಇದ್ದವರೊಡನೆ, ಸಮಾಜಮುಖಿಯಾಗಿ ಸಾರ್ವಜನಿಕರೊಡನೆ ನಮ್ಮ ಸಂಬಂಧಗಳು ಉತ್ತಮವಾಗಿರಬೇಕು ಎಂದು ತಿಳಿಸಿದರು.

ವೃತ್ತಿ ಜೀವನ ಹಾಗೂ ವೈಯಕ್ತಿಕ್ತ ಜೀವನ ಅಭಿವೃದ್ಧಿಗೆ ತರಬೇತಿ ಅವಶ್ಯಕ : ಶ್ರೀ ಶರಣಗೌಡ ಜಿ. ಪಾಟೀಲ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಯ ನೇತಾರನಾಗಿರುವ ಸಂಯುಕ್ತ ಸಹಕಾರಿಯಿಂದ ಸಹಕಾರಿಗಳು ಉತ್ತಮವಾದ ಮತ್ತು ಇನ್ನೊಬ್ಬರು ಅನುಕರಣೀಯ ಸೇವೆಗಳನ್ನು ಅಪೇಕ್ಷಿಸುತ್ತಾರೆ.

ಈ ರೀತಿ ಸೇವೆಗಳನ್ನು ಒದಗಿಸಬೇಕಾದರೆ ನಮ್ಮ ಸಿಬ್ಬಂದಿಯವರು ನಿರಂತರ ಜ್ಞಾನ ದಾಸೋಹದಲ್ಲಿ ಭಾಗವಹಿಸಿ, ತಮ್ಮ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಮಾಡಿದಾಗ ಮಾತ್ರ ಸಾಧ್ಯ. ಹೀಗಾಗಿ ಸರಕಾರದ ಹಂತದಲ್ಲಿ, ಸಹಕಾರ ಇಲಾಖೆಯ ಮಟ್ಟದಲ್ಲಿ, ಸಹಕಾರಿಗಳ ಮಟ್ಟದಲ್ಲಿ ಅವರುಗಳಿಗೆ ಬೇಕಾಗುವ ಮಾಹಿತಿಯನ್ನು ಒದಗಿಸುವುದಕ್ಕಾಗಿ ಈ ರೀತಿಯ ತರಬೇತಿ ಶಿಬಿರವನ್ನು ಪ್ರತಿ 6 ತಿಂಗಳಿಗೊಮ್ಮೆ ವ್ಯವಸ್ಥೆ ಮಾಡಲಾಗುತ್ತಿದೆ.

ಈ ಆಂತರಿಕ ತರಬೇತಿ ವ್ಯವಸ್ಥೆಯಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ತಮ್ಮ ಎರಡು ರಜಾ ದಿನಗಳನ್ನು ತ್ಯಾಗ ಮಾಡಿ ಕೌಟುಂಬಿಕ ಒತ್ತಡವನ್ನು ನಿರ್ವಹಿಸಿ, ಪ್ರತಿಫಲಾಪೇಕ್ಷೆಗಳಿಲ್ಲದೇ ಭಾಗವಹಿಸಿ, ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಿರುವುದು ಹಾಗೂ ಸಂಯುಕ್ತ ಸಹಕಾರಿಯ ದಕ್ಷ ಪ್ರಾಮಾಣಿಕ ಹಾಗೂ ಸಮರ್ಥನೀಯ ಸಿಬ್ಬಂದಿಯಾಗಿ, ಅಧಿಕಾರಿಗಳಾಗಿ ಬೆಳೆಯುತ್ತಿರುವುದು ಶ್ಲಾಘನೀಯ ಎಂದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತರವರು ಆಗಮಿಸಿ, ಮಾತನಾಡಿದರು. ಈ ಸಂದರ್ಭದಲ್ಲಿ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರು ಉಪಸ್ಥಿತರಿದ್ದರು.

ಮೊದಲನೇ ದಿನದ ತರಬೇತಿಯ ಅವಧಿಯಲ್ಲಿ ಶ್ರೀ ಎಸ್.ಆರ್.ಸತೀಶ್‌ಚಂದ್ರರವರಿಂದ "ಮೋಟಿವೇಶನ್ ತರಬೇತಿ"ಯ ನಂತರ ಐಸೆಕ್ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯ ಹಿರಿಯ ಸಂಶೋಧಕರಾದ ಡಾ. ರಾಜಶೇಖರರವರಿಂದ "ನೋಟು ಅಮಾನ್ಯತೆಯಿಂದ ಸಹಕಾರಿ ಸಂಸ್ಥೆಗಳ ಮೇಲಾಗಿರುವ

ಪರಿಣಾಮಗಳಿಂದ ಉಂಟಾಗಿರುವ ಸವಾಲುಗಳನ್ನು ಎದುರಿಸುವುದು ಹೇಗೆ? ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಅವಕಾಶಗಳು ಯಾವುವು?" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ನಂತರ ಮಧ್ಯಾಹ್ನದ ಅವಧಿಯಲ್ಲಿ ಡಾ.ರಮೇಶ್ ಕುಮಾರರವರು "ಕೌಶಲ್ಯ ಹಾಗೂ ಸದಾಚಾರ ಅಭಿವೃದ್ಧಿಯ ಬಗ್ಗೆ ಮತ್ತು ಟೀಮ್ ಡೈನಾಮಿಕ್ಸ್" ವಿಷಯಗಳ ಬಗ್ಗೆ ಪ್ರಾಯೋಗಿಕ ಹಾಗೂ ಉಪನ್ಯಾಸಗಳನ್ನು ನೀಡಿದರು.

ಎರಡನೇ ದಿನ ಬೆಳಿಗ್ಗೆ 7–00 ರಿಂದ 9–15ರವರೆಗೆ "ಲೈಫ್ ಎಂಪಾವರ್‌ಮೆಂಟ್" ಎಂಬ ವೈಯಕ್ತಿಕ ಜೀವನ ವಿಕಾಸಕ್ಕೆ ಸರಳ, ಆರೋಗ್ಯಕರ ಹಾಗೂ ತೃಪ್ತಿದಾಯಕ ಜೀವನಕ್ಕೆ ಪೂರಕವಾದ ವಿಷಯಗಳ ತರಬೇತಿಯನ್ನು ಡಾ.ಹರೀಶರವರು ನಡೆಸಿಕೊಟ್ಟರು.

ಕಾರ್ಯದಲ್ಲಿ ಆದ್ಯತಾ ವಲಯ ನಿರ್ಮಿಸಿಕೊಳ್ಳಿ - ಶ್ರೀ ಹೆಚ್.ವಿ. ರಾಜೀವ

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವರವರು ಪ್ರತಿಯೊಬ್ಬ ಸಿಬ್ಬಂದಿಯವರ ಅನಿಸಿಕೆ ಪಡೆದು, ಅವರ ಸಮಸ್ಯೆಗಳಿಗೆ ಸ್ಪಂದಿಸಿದ ನಂತರ ಮಾತನಾಡಿ ಪ್ರತಿಯೊಬ್ಬ ಸಿಬ್ಬಂದಿಯು ಪ್ರತಿದಿನ ತಾವು ಮಾಡುವ ಕೆಲಸಗಳ ಆದ್ಯತಾ ಪಟ್ಟಿಯನ್ನು ಮಾಡಿ, ಮಹತ್ವದ, ಅತ್ಯಂತ ಮಹತ್ವದ ಹಾಗೂ ಮಹತ್ವವಲ್ಲದ ಮತ್ತು ಮಾಡಲೇಬೇಕಾದ ಕೆಲಸಗಳೆಂದು ವಿಭಾಗ ಮಾಡಿ, ಕಾರ್ಯನಿರ್ವಹಿಸಲು ಸೂಚಿಸಿದರು. ಈ ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರದ ವಿವಿಧ ಕಾರ್ಯಚಟುವಟಿಕೆಗಳಿಂದ ತನ್ನ ಅಸ್ತಿತ್ವವನ್ನು ಹೊಂದಿದೆ. ಈ ಕ್ಷೇತ್ರದ ವೈವಿಧ್ಯತೆಯ ಬಗ್ಗೆ ನಮ್ಮ ಸಹಕಾರ ಕ್ಷೇತ್ರ ಕಾರ್ಯಕರ್ತರು ತಿಳಿದುಕೊಳ್ಳುವುದು ಅವಶ್ಯಕ. ಅದಕ್ಕಾಗಿ ಅವಶ್ಯಕತೆಗನುಗುಣವಾಗಿ ತರಬೇತಿಗಳನ್ನು ಸಂಯುಕ್ತ ಸಹಕಾರಿಯು ವ್ಯವಸ್ಥೆ ಮಾಡುತ್ತಾ ಬಂದಿದೆ. ಈ ತರಬೇತಿಯ ಪೂರ್ಣ ಪ್ರಯೋಜನ ಪಡೆಯುವುದು, ಅದರಂತೆ ನಡೆಯುವುದು ಅವಶ್ಯಕ ಎಂದು ತಿಳಿಸಿದರು. ನಂತರ ಶ್ರೀ ವೈ.ಕುಮಾರ್‌ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಪ್ರಬಂಧ ಸ್ಪರ್ಧೆ ವಿಜೇತರು

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಸಹಕಾರಿಯ ಸಿಬ್ಬಂದಿಗಳಿಗೆ "The Threats and Opportunities of Demonetization to The Cooperative Sector and Its Affect on General Public" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಸಹಕಾರಿಯ ಒಟ್ಟು 65 ಸಿಬ್ಬಂದಿಗಳು ಭಾಗವಹಿಸಿದ್ದರು. ಪ್ರಥಮ ಬಹುಮಾನ ರೂ.3,000/–ಗಳನ್ನು ಶ್ರೀಮತಿ ಶಾಲಿನಿ ಎಂ., ದ್ವಿತೀಯ ಬಹುಮಾನ ರೂ.2,000/–ಗಳನ್ನು ಶ್ರೀಮತಿ ವಿದ್ಯಾ ಸರಸ್ವತಿ ಡಿ.ಎಸ್. ಹಾಗೂ ತೃತೀಯ ಬಹುಮಾನ ರೂ.1,000/–ಗಳನ್ನು ಶ್ರೀ ಚಿದಾನಂದ ಪಿ. ಇವರು ಪಡೆದಿರುತ್ತಾರೆ.

ಸಹಕಾರ ಇಲಾಖೆ ಕಾರ್ಯದರ್ಶಿಯಾಗಿ ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ

ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ ಅವರು ಸಹಕಾರ ಇಲಾಖೆಯ ಕಾರ್ಯದರ್ಶಿಗಳಾಗಿ ರಾಜ್ಯ ಸರ್ಕಾರ ನೇಮಕ ಮಾಡಿದೆ.

ಮದರ್ ಡೈರಿಗೆ ಭೇಟಿ

ತರಬೇತಿಯ ಅಂಗವಾಗಿ ಎಲ್ಲಾ ಶಿಬಿರಾರ್ಥಿಗಳು ಯಲಹಂಕದಲ್ಲಿರುವ ಮದರ್ ಡೈರಿಯನ್ನು ಅಧ್ಯಯನ ಮಾಡುವುದಕ್ಕಾಗಿ ಭೇಟಿ ನೀಡಿದರು. ಭೇಟಿಯ ಅವಧಿಯಲ್ಲಿ ಡೈರಿ ಅಧಿಕಾರಿಗಳಾದ ಶ್ರೀ ಶ್ರೀಕಾಂತ ಹಾಗೂ ಶ್ರೀ ರಮೇಶ್‌ರವರುಗಳು ಮದರ್ ಡೈರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಸಂಯುಕ್ತ ಸಹಕಾರಿಯ ಸಹಕಾರ ಶಿಕ್ಷಣ ನಿಧಿ ಸಲಹಾ ಸಮಿತಿಗೆ ಸದಸ್ಯರಾಗಿ ಶ್ರೀ ಸಿ.ಎನ್.ಪರಶಿವಮೂರ್ತಿ

ನಿಯಮ 10 (ಬಿ)ರಡಿ ರಚಿಸಲಾದ ಸಹಕಾರ ಶಿಕ್ಷಣ ನಿಧಿ ಸಲಹಾ ಸಮಿತಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದು ನಿಯಮಗಳಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 2 ವರ್ಷಗಳ ಹೆಚ್ಚಿಲ್ಲದ ಅವಧಿಗೆ ಶ್ರೀ ಸಿ.ಎನ್.ಪರಶಿವಮೂರ್ತಿಯವರನ್ನು ನಾಮನಿರ್ದೇಶನ ಮಾಡಲಾಗಿರುತ್ತದೆ.

ಬೆಂಗಳೂರು ವಿಭಾಗ :

ಪುನಶ್ಚೇತನ ತರಬೇತಿ : ವಿವಿಧ ಆಯಾಮಗಳನ್ನು ಅಳವಡಿಸಿಕೊಂಡು ಲಾಭದತ್ತ ಹೆಜ್ಜೆ ಹಾಕುವಂತೆ ಸಹಕಾರಿಗಳಿಗೆ ಕರೆ – ಶ್ರೀ ಶರಣಗೌಡ ಜಿ. ಪಾಟೀಲ

ಬೆಂಗಳೂರು : ದಿನಾಂಕ 09 ಫೆಬ್ರವರಿ 2017ರಂದು ಬೆಂಗಳೂರಿನ ಪದ್ಮನಾಭನಗರದ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಕಛೇರಿಯ ವತಿಯಿಂದ ನಷ್ಟವನ್ನು ಹೊಂದಿರುವ ಬೆಂಗಳೂರು ವಿಭಾಗದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಪುನಶ್ಚೇತನ ತರಬೇತಿ"ಯನ್ನು ಹಮ್ಮಿಕೊಳ್ಳಲಾಗಿತ್ತು.

ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಸಹಕಾರಿಗಳು ಅನೇಕ ಕಾರಣಗಳಿಂದ ನಷ್ಟ ಹೊಂದಿದ್ದರೂ ಸಹ ವಿವಿಧ ಆಯಾಮದ ಚಟುವಟಿಕೆಗಳನ್ನು ಸಹಕಾರಿಗಳಲ್ಲಿ ಅಳವಡಿಸಿಕೊಳ್ಳುವುದರ ಮುಖಾಂತರ ಸಹಕಾರಿಗಳು ಲಾಭದತ್ತ ಹೆಜ್ಜೆಹಾಕಬೇಕೆಂದು ಹಾಗೂ ಆಧುನೀಕರಣದ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಶ್ರೀ ಬಿ.ವಸಂತ ನಾಯ್ಕ, ಪ್ರಾದೇಶಿಕ ನಿರ್ದೇಶಕರು, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು ಇವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಶ್ರೀ ಕಿಶೋರ, ವಿಭಾಗೀಯ ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೆರವರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ನಬಾರ್ಡ್‌ನ ನಿವೃತ ಅಧಿಕಾರಿಯಾದ ಶ್ರೀ ವೈ.ವಿ.ಗುಂಡೂರಾವ್‌ರವರು "ಸ್ವಾಟ್ ಅನಾಲೀಸಸ್ ಮತ್ತು ಸಹಕಾರಿಗಳು ಲಾಭಗಳಿಸಲು ಅನುಸರಿಸಬೇಕಾದ ಅಂಶಗಳ" ಕುರಿತು ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆರವರು ಸಹಕಾರಿಗಳ ದೈನಂದಿನ ವ್ಯವಹಾರದಲ್ಲಿ ಆಗುತ್ತಿರುವ ತೊಂದರೆಗಳ ಕುರಿತು ಚರ್ಚಿಸಿದರು. ತರಬೇತಿಯಲ್ಲಿ 46 ಸೌಹಾರ್ದ ಸಹಕಾರಿಗಳಿಂದ 69 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು.

ಮೈಸೂರು ವಿಭಾಗ :

ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ ತರಬೇತಿ ಕಾರ್ಯಕ್ರಮ

ಉಡುಪಿ : ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ ತರಬೇತಿಯನ್ನು ಮೈಸೂರು ವಿಭಾಗೀಯ ಕಛೇರಿಯ ವತಿಯಿಂದ ದಿನಾಂಕ 04 ಫೆಬ್ರವರಿ 2017ರಂದು ಶ್ರೀ ವೀರಭದ್ರ ಕಲಾ ಭವನ, ಕಿನ್ನಿ ಮುಲ್ಕಿ, ಉಡುಪಿ ಜಿಲ್ಲೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ತರಬೇತಿ ಕಾರ್ಯಕ್ರಮವನ್ನು ಉಡುಪಿ ಜಿಲ್ಲೆಯ ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ವಿಠ್ಠಲ್ ಶೇರೇಗಾರ್‌ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕುಂದಾಪುರ ತಾಲ್ಲೂಕಿನ ಸಹಾಯಕ ನಿಬಂಧಕರಾದ ಶ್ರೀಮತಿ ಚಂದ್ರ ಪ್ರತಿಮಾ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಕಾಮತ್ ಹಾಗೂ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಉಪಸ್ಥಿತರಿದ್ದರು.

ತರಬೇತಿಯ ಅವಧಿಯಲ್ಲಿ ಶ್ರೀ ಬಿ.ವಿ.ರವೀಂದ್ರನಾಥರವರು "ಸಹಕಾರಿಯ ವಿಶ್ಲೇಷಣೆ" ಮತ್ತು ಶ್ರೀ ಬಿ.ಎ.ಮಹದೇವಪ್ಪನವರು "ವ್ಯವಹಾರ ಅಭಿವೃದ್ಧಿ ಯೋಜನೆಗಳು" ವಿಷಯಗಳ ಬಗ್ಗೆ ತರಬೇತಿಯನ್ನು ನೀಡಿದರು. ತರಬೇತಿಯ ಅವಧಿಯಲ್ಲಿ ಉಡುಪಿಯ ಉಪ ನಿಬಂಧಕರಾದ ಶ್ರೀ ಪ್ರವೀಣ ನಾಯಕರವರು ಭೇಟಿ ನೀಡಿ, ಸಹಕಾರಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ತರಬೇತಿಯಲ್ಲಿ 30 ಸೌಹಾರ್ದ ಸಹಕಾರಿಗಳಿಂದ 45 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರ ಭೇಟಿ

ಗಂಗಾವತಿ : ದಿನಾಂಕ : 23 ಫೆಬ್ರವರಿ 2017 ರಂದು ಗಂಗಾವತಿ ನಗರದಲ್ಲಿರುವ ಜಗಜ್ಯೋತಿ ಅಣ್ಣ ಬಸವಣ್ಣ ಪತ್ತಿನ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಕಲಬುರಗಿ ವಿಭಾಗೀಯ ಅಧಿಕಾರಿಗಳಾದ ಶ್ರೀ ಸಂಜಯ್ ಕೋರಟಕರ್‌ರವರು ಭೇಟಿ ನೀಡಿ, ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿ ವತಿಯಿಂದ ಶ್ರೀಯುತರುಗಳಿಗೆ ಸನ್ಮಾನಿಸಲಾಯಿತು.

ಗಂಗಾವತಿ : ದಿನಾಂಕ 23 ಫೆಬ್ರವರಿ 2017ರಂದು ಗಗನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಕಲಬುರಗಿ ವಿಭಾಗೀಯ ಅಧಿಕಾರಿಗಳಾದ ಶ್ರೀ ಸಂಜಯ್ ಕೋರಟಕರ್‌ರವರು ಭೇಟಿ ನೀಡಿ, ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಜಕ್ಲಿ ಹಾಗೂ ಉಪಾಧ್ಯಕ್ಷರಾದ ಶ್ರೀ ರಮೇಶ್.ಸಿ ಇವರುಗಳು ಉಪಸ್ಥಿತರಿದ್ದರು.

ಬೆಳಗಾವಿ ವಿಭಾಗ :

ಸುಸ್ಥಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ತರಬೇತಿ

ಬೆಳಗಾವಿ : ಬೆಳಗಾವಿ ಜಿಲ್ಲೆಯಲ್ಲಿನ ಗೋಕಾಕ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಬೆಳಗಾವಿ ವಿಭಾಗೀಯ ಕಛೇರಿಯ ವತಿಯಿಂದ "ಸುಸ್ಥಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ" ತರಬೇತಿಯನ್ನು ದಿನಾಂಕ 23 ಫೆಬ್ರವರಿ 2017ರಂದು ಹೋಟೆಲ್ ಅನಮೋಲ್ ಲಾಡ್ಜ್ & ರೆಸ್ಟೋರೆಂಟ್, ಗೋಕಾಕ ಇಲ್ಲಿ ಏರ್ಪಡಿಸಲಾಗಿತ್ತು. ತರಬೇತಿ ಕಾರ್ಯಕ್ರಮವನ್ನು ಬೆಳಗಾವಿ ಡಿಸಿಸಿ ಬ್ಯಾಂಕ್‌ನ ನಿರ್ದೇಶಕರಾದ ಶ್ರೀ ನೀಲಕಂಠ ಕಪ್ಪಲಗುದ್ದಿರವರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿಗಳಾದ

ಶ್ರೀ ಸಿ.ಎಸ್.ಗುರವ ಹಾಗೂ ಶ್ರೀ ಡಿ.ಜೆ.ಪಾಟೀಲರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. ತರಬೇತಿಯಲ್ಲಿ 94 ಸೌಹಾರ್ದ ಸಹಕಾರಿಗಳಿಂದ 110 ಪ್ರತಿನಿಧಿಗಳು ಭಾಗವಹಿಸಿದ್ದರು.

ಸನ್ನದು ಲೆಕ್ಕಪರಿಶೋಧಕರ ತರಬೇತಿ ಕಾರ್ಯಾಗಾರ

ಸಹಕಾರಿಗಳ ಲೆಕ್ಕಪರಿಶೋಧನೆಯಲ್ಲಿ ಸನ್ನದು ಲೆಕ್ಕಪರಿಶೋಧಕರ ಜವಾಬ್ದಾರಿ ಮಹತ್ವದ್ದು

ಬೆಳಗಾವಿ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟೆರ್ಡ್ ಅಕೌಂಟೆಂಟ್ ಹಾಗೂ ಲೆಕ್ಕಪರಿಶೋಧನಾ ಇಲಾಖೆ ಇವರುಗಳ ಸಹಯೋಗದೊಂದಿಗೆ ದಿನಾಂಕ 06 ಫೆಬ್ರವರಿ 2017ರಂದು ಸನ್ನದು ಲೆಕ್ಕಪರಿಶೋಧಕರಿಗಾಗಿ ಕಾರ್ಯಾಗಾರವನ್ನು ದಿ ಸನ್ನದು ಲೆಕ್ಕಪರಿಶೋಧಕರ ಸಂಸ್ಥೆ, ಬೆಳಗಾವಿ ಶಾಖೆಯ ಸಭಾ ಭವನದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಾಗಾರವನ್ನು ಸಹಕಾರಿಗಳ ಉಪನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣಗೋಳರವರು ಉದ್ಘಾಟಿಸಿ, ಮಾತನಾಡಿದರು. ಅಧ್ಯಕ್ಷತೆಯನ್ನು ಸನ್ನದು ಲೆಕ್ಕಪರಿಶೋಧಕ ಸಂಸ್ಥೆಯ ಬೆಳಗಾವಿ ಶಾಖೆಯ ಅಧ್ಯಕ್ಷರಾದ ಶ್ರೀ ಪ್ರವೀಣ ಫಾಳಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬೆಳಗಾವಿ ಶಾಖೆಯ ಲೆಕ್ಕಪರಿಶೋಧನಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಕೆ. ಮಹೇಶ್ವರಪ್ಪ ಹಾಗೂ ಉಪಾಧ್ಯಕ್ಷರಾದ ಶ್ರೀ ಚೇತನ ಚೌಗುಲ ಮತ್ತು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಯಾನಂದ ಬಾಬುರಾವ ಜಾಧವ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ಉಪಸ್ಥಿತರಿದ್ದರು. ಸನ್ನದು ಲೆಕ್ಕಪರಿಶೋಧನಾ ಸಂಸ್ಥೆಯ ಸಮನ್ವಯ ಅಧಿಕಾರಿಯಾದ ಶ್ರೀ ಕುಲಕರ್ಣಿರವರು ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು. ಬೆಳಗಾವಿ ವಿಭಾಗೀಯ ಅಧಿಕಾರಿಯಾದ ಶ್ರೀ ಜಿ.ಎಸ್.ಟೋಪಣ್ಣವರರವರು ವಂದಿಸಿದರು. ಕಾರ್ಯಾಗಾರದಲ್ಲಿ 85 ಸನ್ನದು ಲೆಕ್ಕಪರಿಶೋಧಕರು ಭಾಗವಹಿಸಿದ್ದರು.

ಸೆವೆನ್ ಹಿಲ್ಸ್ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ವಿಚಾರಣೆಗೆ ಆದೇಶ

ಸಹಕಾರಿಗಳ ನಿಬಂಧಕರ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ ಆರ್‌ಎಸ್‌ಆರ್/ಸೌಹಾರ್ದ/ವಿಚಾರಣೆ/182/2016-17 ದಿನಾಂಕ 03-02-2017ರ ಮೂಲಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರಕರಣ 35ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಎಂ.ಕೆ.ಅಯ್ಯಪ್ಪ, ಭಾ.ಆ.ಸೇ. ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರು ಸೆವೆನ್ ಹಿಲ್ಸ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ ಜಿಲ್ಲೆ ಸಹಕಾರಿಗೆ ಆದೇಶದಲ್ಲಿ ತಿಳಿಸಿರುವ ಅಂಶಗಳ ಕುರಿತು ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಯನ್ನಾಗಿ ಸಹಕಾರಿಗಳ ಉಪನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ನೇಮಿಸಿದ್ದಾರೆ.

ಇ-ಸ್ಟ್ಯಾಂಪಿಂಗ್ ತರಬೇತಿ ಕಾರ್ಯಕ್ರಮ

ಸೇವೆ, ಲಾಭ ಹಾಗೂ ಸಾಮಾಜಿಕ ಬದ್ಧತೆ ಸಹಕಾರಿಗಳ ಗುರಿಯಾಗಬೇಕು - ಶ್ರೀ ವಸಂತ ನಾಯ್ಕ

ಬೆಂಗಳೂರು : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಆಯೋಜಿಸಲಾಗಿರುವ 2017ನೇ ಸಾಲಿನ ಇ-ಸ್ಟ್ಯಾಂಪಿಂಗ್ ತರಬೇತಿ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ಮಾರ್ಗದರ್ಶಿ ಕೈಪಿಡಿಯನ್ನು ದಿನಾಂಕ 03 ಮಾರ್ಚ್ 2017ರಂದು ಆರ್‌ಐಸಿಎಂನಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಪ್ರಾಂತೀಯ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾಂತೀಯ ನಿರ್ದೇಶಕರಾದ ಶ್ರೀ ವಸಂತ ನಾಯ್ಕರವರು ಬಿಡುಗಡೆ ಮಾಡಿ, ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ಸೇವೆ ನೀಡುವುದರ ಜೊತೆಗೆ ಲಾಭ ಹಂಚುವುದು ಅನಿವಾರ್ಯವಾಗುತ್ತದೆ. ಅದರಂತೆ ಇ-ಸ್ಟ್ಯಾಂಪಿಂಗ್ ಕೇಂದ್ರಗಳ ಮೂಲಕ ಸಾಮಾಜಿಕ ಸೇವೆಯನ್ನು ಉತ್ತಮವಾಗಿ ನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯ ಕಾರ್ಯ ಶ್ಲಾಘನೀಯ ಎಂದರು.

ಕಾರ್ಯಕ್ರಮ ಉದ್ಘಾಟನೆ

ಮಾನವ ಸಂಪನ್ಮೂಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಅಗತ್ಯ - ಶ್ರೀ ಹೆಚ್.ಎಸ್.ನಾಗರಾಜಯ್ಯ

ಬೆಂಗಳೂರು : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಇ-ಸ್ಟ್ಯಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳ 2ನೇ ತಂಡದ ತರಬೇತಿ ಕಾರ್ಯಕ್ರಮವನ್ನು ದಿನಾಂಕ 04 ಮಾರ್ಚ್ 2017ರಂದು ಆರ್‌ಐಸಿಎಂ, ಬೆಂಗಳೂರಿನಲ್ಲಿ ನಿವೃತ್ತ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್.ನಾಗರಾಜಯ್ಯನವರು ಉದ್ಘಾಟಿಸಿ, ಸಹಕಾರ ಕ್ಷೇತ್ರದ ಮೂಲಕ ಇ-ಸ್ಟ್ಯಾಂಪಿಂಗ್ ವ್ಯವಹಾರಗಳನ್ನು ನಡೆಸುವುದರ ಮೂಲಕ ಮಾನವ ಸಂಪನ್ಮೂಲದ ಸದ್ಬಳಕೆಗೆ ಹಾಗೂ ಅಭಿವೃದ್ಧಿಗೆ ಅವಕಾಶವಾಗಿದೆ. ಇದೊಂದು ಉತ್ತಮ ಕಾರ್ಯ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಉತ್ತಮವಾಗಿ ಜರುಗುತ್ತಿರುವುದು ಶ್ಲಾಘನೀಯ ಎಂದರು.

ಇ-ಸ್ಟ್ಯಾಂಪಿಂಗ್ ಕೇಂದ್ರಗಳ ಕಾರ್ಯ ಉತ್ತಮ ಗುಣಮಟ್ಟ ಹೊಂದುವುದು ಅಗತ್ಯ - ಶ್ರೀ ಶರಣಗೌಡ ಜಿ. ಪಾಟೀಲ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಮಾತನಾಡಿ ಸೌಹಾರ್ದ ಸಹಕಾರಿಗಳ ಮೂಲಕ ಇ-ಸ್ಟ್ಯಾಂಪಿಂಗ್ ಕೇಂದ್ರಗಳ ಸಂಖ್ಯೆ 1011ಕ್ಕೆ ತಲುಪಿದೆ. ಇದೊಂದು ಹೆಮ್ಮೆಯ ವಿಷಯ. ಇವುಗಳ ಗುಣಮಟ್ಟ ನಿರಂತರವಾಗಿ ಉತ್ತಮವಾಗಿರುವಂತೆ ಕಾರ್ಯನಿರ್ವಹಿಸುವುದು ನಮ್ಮ ಮುಂದಿರುವ ಸವಾಲು, ಅದಕ್ಕಾಗಿ ಈ ರೀತಿಯ ತರಬೇತಿ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ತರಬೇತಿಯಲ್ಲಿ 90 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು.

ಗಣ್ಯರಿಂದ ಮಾರ್ಗದರ್ಶಿ ಕೈಪಿಡಿ ಬಿಡುಗಡೆ

ಸಹಕಾರಿಗಳಲ್ಲಿ ವೈವಿಧ್ಯಮಯ ಚಟುವಟಿಕೆಗಳು ಅಗತ್ಯ - ಶ್ರೀ ಹೆಚ್.ವಿ.ರಾಜೀವ

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿ ಸಹಕಾರಿಗಳಲ್ಲಿ ಸಾಂಪ್ರದಾಯಿಕ ಠೇವಣಿ ಸಂಗ್ರಹ ಹಾಗೂ ಸಾಲ ನೀಡುವಿಕೆಗಳ ಜೊತೆಗೆ ಇತರೆ ಬಡ್ಡಿಯೇತರ ಆದಾಯಗಳನ್ನು ಹೆಚ್ಚಿಸುವಂತಹ ವೈವಿಧ್ಯಮಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಅವಶ್ಯಕ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಸಂವಾದ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಹಾಗೂ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ವಂದನೆಯನ್ನು ಸಲ್ಲಿಸಿದರು.

ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ನಿಯಮಗಳನ್ನು ಉಲ್ಲಂಘಿಸಿ ಸಹಕಾರಿಯ ನಷ್ಟಕ್ಕೆ ಕಾರಣರಾದವರ ಮೇಲೆ ಸಂಯುಕ್ತ ಸಹಕಾರಿಯಿಂದ ಅಧಿಭಾರ (ಸರ್‌ಚಾರ್ಜ್) ಅರ್ಜಿ ದಾಖಲಿಸಿರುವ ಪ್ರಕರಣಗಳು

ಕ್ರ.ಸಂ.	ಅಧಿಭಾರ ಅರ್ಜಿ ಸಂಖ್ಯೆ	ಪಕ್ಷಗಾರರು	ಕಾರಣ	ಅಧಿಭಾರ ದಾಖಲೆ ಯಾರ ಮೇಲೆ
1.	ಆರ್‌ಸಿಎಸ್/ಡಿಐಎಸ್/ ಎಸ್‌ಯುಆರ್–1/2015–16	ಹಿಂದುಸ್ತಾನ್ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ (ಎಸ್‌ಎಂಜಿ–58)	ಕರ್ನಾಟಕ ಸೌಹಾರ್ದ ಸಹಕಾರಿ ಅಧಿ ನಿಯಮದ ಪ್ರಾವಧಾನವನ್ನು ಉಲ್ಲಂಘಿಸಿ ಗೃಹ ನಿರ್ಮಾಣ ಸಹಕಾರಿಯ ಚಟುವಟಿಕೆ, ಉಪವಿಧಿಯ ಪ್ರಾವಧಾನವನ್ನು ಉಲ್ಲಂಘಿಸಿ ರಚನೆಯಾಗಿರುವ ಉಪ ಸಮಿತಿಯು ಕಮೀಷನ್ ನೀಡಲು, ಭೂಮಿಯನ್ನು ಅಭಿವೃದ್ಧಿಗೊಳಿಸಲು ಮತ್ತು ನಿವೇಶನ ರೂಪಿಸಲು ಮುಂಗಡವನ್ನು ಸಹಕಾರಿಯಿಂದ ಪಾವತಿಸಿದ್ದು ಸೇರಿದಂತೆ ಆಕ್ರಮ ಪಾವತಿಯ ಮೂಲಕ ಸಹಕಾರಿಗೆ ಒಟ್ಟಾರೆ ರೂ.1,83, 80009/–ಗಳ ನಷ್ಟಕ್ಕೆ ಕಾರಣ	ಸಹಕಾರಿಯ ಆಡಳಿತ ಮಂಡಲಿ ಸದಸ್ಯರು
2.	ಆರ್‌ಸಿಎಸ್/ಡಿಐಎಸ್/ ಎಸ್‌ಯುಆರ್–2/2015–16 ಆರ್‌ಸಿಎಸ್/ಡಿಐಎಸ್/ ಎಸ್‌ಯುಆರ್–3/2015–16	ದಿ ಮಯೂರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ (ಬಿಜಿಎಂ–272)	ಸಹಕಾರಿಯು ನಿರಂತರ ನಷ್ಟದಲ್ಲಿರುವಾಗ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಆರ್. ಗುಂಡಕಲ್ಲೆ ಇವರು ಸಹಕಾರಿಯ ಆಡಳಿತ ಮಂಡಲಿಯ ಅನುಮೋದನೆ ಪಡೆಯದೇ ಸ್ಥಳ ಖರೀದಿಗೆ ರೂ.6,86,400/–ಗಳನ್ನು ಪಾವತಿಸಿರುತ್ತಾರೆ. ಆದರೆ, ಖರೀದಿ ಪತ್ರದಲ್ಲಿ ರೂ. 1,83,000/–ಗಳನ್ನು ತೋರಿಸಲಾಗಿರುತ್ತದೆ. ನಂತರ ಕೂಡಲೇ ಸದರಿ ನಿವೇಶನದಲ್ಲಿ ಕಟ್ಟಡ ಕಟ್ಟಲು ಸಹಕಾರಿಯಿಂದ ರೂ.34,96,955/–ಗಳ ಠೇವಣಿ ಹಣವನ್ನು ಕಟ್ಟಡ ಕಟ್ಟಲು ಉಪಯೋಗಿಸಿರುತ್ತಾರೆ. ನಂತರದಲ್ಲಿ ಅಧ್ಯಕ್ಷರ ಸ್ಥಾನಕ್ಕೆ ಶ್ರೀ ಬಸವರಾಜ ಆರ್. ಗುಂಡಕಲ್ಲೆ ಇವರು ರಾಜೀನಾಮೆ ನೀಡಿ, ನಿರ್ದೇಶಕರಾದ ಶ್ರೀ ರಾಜೇಂದ್ರ ಎಲ್. ಹಟ್ಟಿ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ, ಸಹಕಾರಿಯ ಆಸ್ತಿಯನ್ನು ರೂ. 26.60 ಲಕ್ಷಕ್ಕೆ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಪ್ರಸ್ತುತ ನಿರ್ದೇಶಕರಾದ ಶ್ರೀ ಬಸವರಾಜ ಆರ್. ಗುಂಡಕಲ್ಲೆ ಇವರು ಖರೀದಿ ಮಾಡಿರುತ್ತಾರೆ. ನಂತರದಲ್ಲಿ ಶ್ರೀ ಬಸವರಾಜ ಆರ್. ಗುಂಡಕಲ್ಲೆ ಸಹಕಾರಿಯ ಅಧ್ಯಕ್ಷರಾಗಿ ಮರು ಆಯ್ಕೆ ಆಗಿರುತ್ತಾರೆ. ನಂತರದಲ್ಲಿ ದಿ ಮಯೂರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಹೆಸರಿನಲ್ಲಿ ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಇದರಲ್ಲಿ ರೂ.100.00 ಸಾಲ ಪಡೆದಿರುತ್ತಾರೆ. ಈ ಮೂಲಕ ಸಹಕಾರಿಗೆ ಒಟ್ಟಾರೆ ರೂ.34,20,000/–ಗಳ ನಷ್ಟಕ್ಕೆ ಕಾರಣ	ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಆರ್. ಗುಂಡಕಲ್ಲೆ ಮತ್ತು ಶ್ರೀ ರಾಜೇಂದ್ರ ಎಲ್. ಹಟ್ಟಿ
3.	ಜೆಆರ್‌ಡಿ / ಕೆಎಸ್‌ಎಸ್‌ಎಫ್‌ಸಿಎಲ್ / 90/2016–17	ಶ್ರೀ ಜಗದ್ಗುರು ಪಂಚಾಚಾರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇಟಗಿ, ಖಾನಾಪೂರ. (ಬಿಜಿಎಂ–381)	ಸಹಕಾರಿಯಿಂದ ಶ್ರೀ ಜಗದ್ಗುರು ಪಂಚಾ ಚಾರ್ಯ ಶಿಕ್ಷಣ ಪ್ರಸಾರ ಸಮಿತಿಗೆ ರೂ.16, 25,000/–ಗಳ ಮುಂಗಡ ಪಾವತಿಸಿದ್ದು, ಸದರಿ ಹಣದಲ್ಲಿ ರೂ.7,00, 000/–ಗಳನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ, ಉಪಾಧ್ಯಕ್ಷರಾದ ಶ್ರೀ ಬಸಲಿಂಗಯ್ಯ ಶಿವಬಸಯ್ಯ ಲದ್ದಿಮಠ, ನಿರ್ದೇಶಕರಾದ ಶ್ರೀ ಶಂಕರಯ್ಯ ವೀರಭದ್ರಯ್ಯ ಹಿರೇಮಠ, ಶ್ರೀ ಕಲ್ಲಯ್ಯ ಕಲ್ಲಯ್ಯ ಸಂಬಳದ ಇವರುಗಳ ಹೆಸರಿನಲ್ಲಿ 2 ಎಕರೆ ಜಾಗವನ್ನು ಖರೀದಿಸಲು ಉಪಯೋಗಿಸಿರುತ್ತಾರೆ. ಸದರಿ ಮುಂಗಡವು ಸಹಕಾರಿಗೆ ಮರುಪಾವತಿಸಿರುವುದಿಲ್ಲ. ಈ ಮೂಲಕ ಸಹಕಾರಿಗೆ ಒಟ್ಟಾರೆ ರೂ.16,25, 000/–ಗಳ ನಷ್ಟಕ್ಕೆ ಕಾರಣ	ಶ್ರೀ ಜಗದ್ಗುರು ಪಂಚಾಚಾರ್ಯ ಶಿಕ್ಷಣ ಪ್ರಸಾರ ಸಮಿತಿ, ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ, ಉಪಾಧ್ಯಕ್ಷರಾದ ಶ್ರೀ ಬಸಲಿಂಗಯ್ಯ ಶಿವಬಸಯ್ಯ ಲದ್ದಿಮಠ, ನಿರ್ದೇಶಕರಾದ ಶ್ರೀ ಶಂಕರಯ್ಯ ವೀರಭದ್ರಯ್ಯ ಹಿರೇಮಠ, ಶ್ರೀ ಕಲ್ಲಯ್ಯ ಕಲ್ಲಯ್ಯ ಸಂಬಳದ ಹಾಗೂ ಸಹಕಾರಿಯ ಮಾಜಿ ಮುಖ್ಯಕಾರ್ಯನಿರ್ವಾಹಕ ಶ್ರೀ ವೀರಯ್ಯಾ ಹಿರೇಮಠ

4.	ಜೆಆರ್‌ಡಿ / ಕೆಎಸ್‌ಎಸ್‌ಎಫ್‌ಸಿಎಲ್ / 91 / 2016–17	ಶ್ರೀ ಜಗದ್ಗುರು ಪಂಚಾಚಾರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇಟಗಿ, ಖಾನಾಪೂರ. (ಬಿಜಿಎಂ–381)	ದಿನಾಂಕ 06.07.2012ರ ಸಹಕಾರಿಯ ಆಡಳಿತ ಮಂಡಲಿಯ ಸಭೆಯಲ್ಲಿ ಶ್ರೀ ಬಸವೇಶ್ವರ ಕನ್ನಡ ಕಾನ್ವಂಟ್ ಪ್ರಾಥಮಿಕ ಶಾಲೆಗೆ ಹಳೆ ವಾಹನ ಖರೀದಿಗೆ ರೂ.4,00,000/–ಗಳ ಸಾಲವನ್ನು ಸಹಕಾರಿಯ ಆಡಳಿತ ಮಂಡಲಿ ಸದಸ್ಯರಾದ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ, ಉಪಾಧ್ಯಕ್ಷರಾದ ಶ್ರೀ. ಬಸಲಿಂಗಯ್ಯ ಶಿವಬಸಯ್ಯ ಲದ್ದಿಮಠ, ನಿರ್ದೇಶಕರಾದ ಶ್ರೀ ಶಂಕರಯ್ಯ ವೀರಭದ್ರಯ್ಯ ಹಿರೇಮಠ, ಶ್ರೀ ರುದ್ರಯ್ಯ ರಾಮಯ್ಯ ಪೂಜಾರ, ಶ್ರೀ ಬಸವರಾಜ ಹೂವಯ್ಯ ಪೂಜಾರ, ಶ್ರೀ ಕಲ್ಲಯ್ಯ ಕಲ್ಲಯ್ಯ ಸಂಬಳ, ಶ್ರೀ ಬಸಯ್ಯ ವೀರಭದ್ರಯ್ಯ ಶಾಂಡಿಲೇಶ್ವರಮಠ, ಶ್ರೀ ಶಿವಲಿಂಗಯ್ಯ ಶಿವಮೂರ್ತಿಯ್ಯ ಗಾಲಿಮಠ ಇವರುಗಳು ಸಾಲ ಮಂಜೂರು ಮಾಡುವ ಪೂರ್ವದಲ್ಲಿ ಅಗತ್ಯ ದಾಖಲೆಗಳನ್ನು, ವಾಹನ ಮೌಲ್ಯದ ಕುರಿತಾದ ವರದಿಯನ್ನು ಪಡೆದಿರುವುದಿಲ್ಲ. ಸದರಿ ಸಾಲಕ್ಕೆ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ, ಉಪಾಧ್ಯಕ್ಷರಾದ ಶ್ರೀ ಬಸಲಿಂಗಯ್ಯ ಶಿವಬಸಯ್ಯ ಲದ್ದಿಮಠ ಇವರುಗಳು ಜಾಮೀನುದಾರರಾಗಿರುತ್ತಾರೆ. ನಂತರದಲ್ಲಿ ದಿನಾಂಕ: 24.07.2013ಕ್ಕೆ ರೂ.18,000/–ಗಳ ಹಣ ಮರುಪಾವತಿಯಾಗಿರುತ್ತದೆ ಎಂಬ ರೀತಿಯಲ್ಲಿ ದಾಖಲೆ ಸೃಷ್ಟಿಸಿರುತ್ತಾರೆ. ಆದರೆ, ಸದರಿ ಹಣವು ಮರುಪಾವತಿಯಾಗಿರುವುದಿಲ್ಲ. ಆದ್ದರಿಂದ, ಸಾಲದ ಮೊತ್ತವು ಒಟ್ಟು ರೂ. 4,18,000/–ಗಳು ಆಗಿರುತ್ತದೆ. ಈ ಮೂಲಕ ಸಹಕಾರಿಗೆ ಒಟ್ಟಾರೆ ರೂ.4,18,000/–ಗಳ ನಷ್ಟಕ್ಕೆ ಕಾರಣ	ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ, ಉಪಾಧ್ಯಕ್ಷರಾದ ಶ್ರೀ. ಬಸಲಿಂಗಯ್ಯ ಶಿವಬಸಯ್ಯ ಲದ್ದಿಮಠ, ನಿರ್ದೇಶಕರಾದ ಶ್ರೀ ಶಂಕರಯ್ಯ ವೀರಭದ್ರಯ್ಯ ಹಿರೇಮಠ, ಶ್ರೀ ರುದ್ರಯ್ಯ ರಾಮಯ್ಯ ಪೂಜಾರ, ಶ್ರೀ ಬಸವರಾಜ ಹೂವಯ್ಯ ಪೂಜಾರ, ಕಲ್ಲಯ್ಯ ಕಲ್ಲಯ್ಯ ಸಂಬಳ, ಶ್ರೀ ಬಸಯ್ಯ ವೀರಭದ್ರಯ್ಯ ಶಾಂಡಿಲೇಶ್ವರಮಠ, ಶ್ರೀ ಶಿವಲಿಂಗಯ್ಯ ಶಿವಮೂರ್ತಿಯ್ಯ ಗಾಲಿಮಠ
5.	ಜೆಆರ್‌ಡಿ / ಕೆಎಸ್‌ಎಸ್‌ಎಫ್‌ಸಿಎಲ್ / 92 / 2016–17	ಶ್ರೀ ಜಗದ್ಗುರು ಪಂಚಾಚಾರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇಟಗಿ, ಖಾನಾಪೂರ. (ಬಿಜಿಎಂ–381)	ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ವೀರಯ್ಯಾ ಹಿರೇಮಠ ಇವರುಗಳು ಆಡಳಿತ ಮಂಡಲಿಯ ಅನುಮೋದನೆ ಪಡೆಯದೇ ಶ್ರೀ ಜಗದ್ಗುರು ಪಂಚಾಚಾರ್ಯ ಮುದ್ರಣ ಕೇಂದ್ರಕ್ಕೆ ರೂ. 5,00,000/– ಮುಂಗಡವಾಗಿ ಪಾವತಿಸಿರುತ್ತಾರೆ. ನಂತರದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಮುದ್ರಣ ಕೇಂದ್ರವು ಮುಂಗಡ ಮೊತ್ತವಾದ ರೂ.5,00,000/–ದಲ್ಲಿ ಅನುಕ್ರಮವಾಗಿ ರೂ.87,000/– ಮತ್ತು ರೂ.2,00, 000/– ಮರುಪಾವತಿಸಿದ್ದು, ಮುಂಗಡ ಉಳಿಕೆ ಮೊತ್ತ ರೂ.2,13,000/– ಆಗಿರುತ್ತದೆ. ಸದರಿ ಮುಂಗಡ ಹಣವು ಸಹಕಾರಿಗೆ ಮರುಪಾವತಿಯಾಗಿರುವುದಿಲ್ಲ. ಈ ಮೂಲಕ ಸಹಕಾರಿಗೆ ಒಟ್ಟಾರೆ ರೂ.2,13,000/–ಗಳ ನಷ್ಟಕ್ಕೆ ಕಾರಣ	ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ವೀರಯ್ಯಾ ಹಿರೇಮಠ
6.		ಶ್ರೀ ಜಗದ್ಗುರು ಪಂಚಾಚಾರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇಟಗಿ, ಖಾನಾಪೂರ. (ಬಿಜಿಎಂ–381)	ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ ಇವರು ಸಹಕಾರಿಯ ಆಡಳಿತ ಮಂಡಲಿಯ ಅನುಮೋದನೆ ಪಡೆಯದೇ 31.03.2014ಕ್ಕೆ ರೂ.2,10,000/– ಸಹಕಾರಿಯಿಂದ ಮುಂಗಡವಾಗಿ ಪಡೆದಿರುತ್ತಾರೆ. ಸದರಿ ಮುಂಗಡ ಹಣವು ಸಹಕಾರಿಗೆ ಮರುಪಾವತಿಯಾಗಿರುವುದಿಲ್ಲ. ಈ ಮೂಲಕ ಸಹಕಾರಿಗೆ ರೂ.2,10,000/–ಗಳ ನಷ್ಟಕ್ಕೆ ಕಾರಣ	ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಯ್ಯ ಶಂಕರಯ್ಯ ಕಲ್ಮಠ

7.		ಶ್ರೀ ಆಶ್ರಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ. (ಬಿಜಿಎಂ–96)	ಆಡಳಿತ ಮಂಡಲಿಯ ಸದಸ್ಯರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಆಶ್ರಯ ಇನ್ಫ್ರಾಕಾನ್ ಲಿ., ಇದಕ್ಕೆ ರೂ.13,52,37,883/–ಗಳನ್ನು ಮತ್ತು ಸಹಕಾರಿಯ ನಾರ್ವೇಕರ ಗಲ್ಲಿ ಶಾಖೆ, ಟಿಳಕವಾಡಿ ಶಾಖೆ ಮತ್ತು ಕಲ್ಮಠ ರೋಡ್ ಶಾಖೆಗಳಲ್ಲಿ ಒಟ್ಟು ರೂ.33,83,51,000/–ಗಳು ದುರುಪಯೋಗವಾಗಿರುತ್ತದೆ. ಈ ಮೂಲಕ ಸಹಕಾರಿಗೆ ಒಟ್ಟಾರೆ ರೂ.39,02,94,960/–ಗಳ ನಷ್ಟಕ್ಕೆ ಕಾರಣ	2009 ರಿಂದ 2016ನೇ ಸಾಲಿನ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು
8.		ಶ್ರೀ ಕಪಿಲನಾಥ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಳಗಾವಿ. (ಬಿಜಿಎಂ–192)	ಸಹಕಾರಿಯು ದಿನಾಂಕ 31–03–2013ಕ್ಕೆ ಶ್ರೀ ಕ್ರಾಂತಿವೀರ ಸಂಗೋಳಿ ರಾಯಣ್ಣ ಸೌಹಾರ್ದ ಸಹಕಾರಿ ನಿ, ನಿಪ್ಪಾಣಿಯಲ್ಲಿ ರೂ.11,78,766/– ಹಾಗೂ ವಿನಾಯಕ ಸೌಹಾರ್ದ ಸಹಕಾರಿ ನಿ, ಬೆಳಗಾವಿಯಲ್ಲಿ ರೂ.1,00,000/– ಹೂಡಿಕೆ ಮಾಡಲಾಗಿದೆ ಎಂದು ಸಹಕಾರಿಯ ಲೆಕ್ಕಪರಿಶೋಧನಾ ವರದಿಯಲ್ಲಿ ತೋರಿಸಲಾಗಿದೆ. ಆದರೆ, ಶ್ರೀ ಕ್ರಾಂತಿವೀರ ಸಂಗೋಳಿ ರಾಯಣ್ಣ ಸೌಹಾರ್ದ ಸಹಕಾರಿ ನಿ, ನಿಪ್ಪಾಣಿಯಲ್ಲಿ ಮತ್ತು ವಿನಾಯಕ ಪತ್ತಿನ ಸೌಹಾರ್ದ ಸಹಕಾರಿ ನಿ, ಬೆಳಗಾವಿ ಇದರಲ್ಲಿ ಹೂಡಿಕೆ ಮಾಡಿರುವುದಿಲ್ಲವೆಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸಹಕಾರಿಯು ಇದೇ ಮೊತ್ತವನ್ನು ಸಾಲವಾಗಿ ಸಹಕಾರಿಯ ನಿಯಮದಂತೆ ನೀಡಿದ್ದರೆ 2009–10, 2010–11, 2011–12, 2012–13, 2013–14 ಮತ್ತು 2014–15ನೇ ಸಾಲಿನಲ್ಲಿ ಕ್ರಮವಾಗಿ ರೂ.2.56 ಲಕ್ಷ, 3.00 ಲಕ್ಷ, 3.00 ಲಕ್ಷ, 3.25 ಲಕ್ಷ, 3.30 ಲಕ್ಷ ಮತ್ತು 3.50 ಲಕ್ಷ ಒಟ್ಟು ರೂ.18.61 ಲಕ್ಷ ಬಡ್ಡಿಯ ಮುಖಾಂತರ ಬರುವ ಆದಾಯದ ನಷ್ಟವನ್ನು ಉಂಟುಮಾಡುವ ಮೂಲಕ ಸಹಕಾರಿಗೆ ಹಾನಿ ಉಂಟಾಗಿದೆ. ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ರೂ.18.61 ಲಕ್ಷ ಮತ್ತು ದುರ್ಬಳಕೆ ಮಾಡಿಕೊಂಡಿರುವ ರೂ.12,78,766 ಸೇರಿ ಒಟ್ಟು ರೂ.31,39,766 ಲಕ್ಷ ನಷ್ಟ ಉಂಟು ಮಾಡಿರುತ್ತಾರೆ. ದಿನಾಂಕ 27–01–2007ರಂದು ಶ್ರೀ ಅಭಿನಂದನ ಚೌಗಲಾರವರ ಜಮೀನನ್ನು ಶ್ರೀ ಕಪಿಲನಾಥ ಪತ್ತಿನ ಸೌಹಾರ್ದ ಸಹಕಾರಿ ನಿ, ಬೆಳಗಾವಿ ಹೆಸರಿಗೆ ಮಾರ್ಟಗೇಜನ್ನು ದಿನಾಂಕ 27–01–2007ರಂದು ಚಿಕ್ಕೋಡಿ ತಾಲೂಕಿನ ಸದಲಗಾ ಸಬ್ ರಿಜಿಸ್ಟ್ರಾರ ಕಛೇರಿಯಲ್ಲಿ ಮಾಡಿಕೊಂಡು ಶ್ರೀ ಇಂದ್ರಜಿತ ಪಾಟೀಲರವರಿಗೆ ರೂ.7,85,645, ಅಭಿನಂದನ ಚೌಗಲಾರವರಿಗೆ ರೂ.8.00 ಲಕ್ಷ ಮತ್ತು ವಜ್ರಕುಮಾರ ಚೌಗಲರವರಿಗೆ ರೂ.8.00 ಲಕ್ಷ ಸಾಲಗಳನ್ನು ಸಹಕಾರಿಯ ಆಡಳಿತ ಮಂಡಲಿಯ ಸಭೆಯಲ್ಲಿ ಚರ್ಚಿಸದೇ ಮತ್ತು ನೀಡಿರುವ ಸಾಲದ ಬಗ್ಗೆ ಸಾಲದ ರಿಜಿಸ್ಟ್ರಾರ್‌ನಲ್ಲಿ ಆಗಲಿ ಅಥವಾ ಸಹಕಾರಿಯ ಇತರೆ ದಾಖಲಾತಿಗಳಲ್ಲಿ ನಮೂದಿಸದೇ ಸಹಕಾರಿಯ ದಾಖಲಾತಿಗಳನ್ನು ಬಳಸಿಕೊಂಡು ಸಹಕಾರಿಯ ಲೆಕ್ಕಪತ್ರದಲ್ಲಿ ತೋರಿಸದೇ ನೀಡಲಾಗಿದೆ. ಈ ಮೂಲಕ ಸಹಕಾರಿಗೆ ಅಸಲು ರೂ.23,85,645/– ಸೇರಿದಂತೆ ಒಟ್ಟು ರೂ.58,20,973/– ನಷ್ಟ ಉಂಟು ಮಾಡಿರುತ್ತಾರೆ.ಸಹಕಾರಿಯಿಂದ ದಿನಾಂಕ 20–06–2002ರಂದು ಶ್ರೀ ಸಂಜಯ ಶಾಹಾ ರವರಿಗೆ ರೂ.5.00 ಲಕ್ಷ ಸಾಲ ನೀಡಲಾಗಿದೆ. ಸದರಿ ಸಾಲಗಾರರು ದಿನಾಂಕ 17–02–2009ರಂದು ಬಡ್ಡಿಸಹಿತ ರೂ.7,20,000ದ ಚೆಕ್ಕನು ಸಹಕಾರಿಯ ಹೆಸರಿನಲ್ಲಿ ನೀಡಿದ್ದು, ಸದರಿ ಚೆಕ್ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಚೆಕ್ ನಂ. 811020 ಬೌನ್ಸ್ ಆದ ಕಾರಣ ಜೆಎಮ್‌ಎಫ್ ನ್ಯಾಯಾಲಯ ಬೆಳಗಾವಿಯಲ್ಲಿ ದಾವೆ ಹೂಡಲಾಗಿದ್ದು, ದಾವೆ ಸಂಖ್ಯೆ ಸಿಸಿ.1073/09 ಆಗಿದ್ದು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ದಾವೆ ಮುಖಾಂತರ ಸಾಲಗಾರರಿಂದ ಸಾಲ ವಸೂಲಾತಿ ಮಾಡಿಕೊಂಡು ಸಹಕಾರಿಯಲ್ಲಿ ಜಮೆ ತೋರಿಸದೇ ಸ್ವಂತಕ್ಕೆ ಬಳಸಿಕೊಂಡಿರುತ್ತಾರೆ ಮತ್ತು ಸಹಕಾರಿಯಿಂದ ದಾಖಲಾದ 5 ದಾವೆಗಳಿಂದ ವಸೂಲಿಯಾದ ಹಣವನ್ನು ಸಹಕಾರಿಯ ಖಾತೆಗಳಿಗೆ ತೋರಿಸದೆ ಸ್ವಂತಕ್ಕೆ ಬಳಸಿಕೊಂಡಿರುತ್ತಾರೆ. ಈ ಮೂಲಕ ಸಹಕಾರಿಯ ನಷ್ಟಕ್ಕೆ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಹಾಲಪ್ಪನವರ ಪರಗೌಡ ಕಾರಣರಾಗಿರುತ್ತಾರೆ.	ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಹಾಲಪ್ಪನವರ ಪರಗೌಡ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಸಮಾಚಾರ

ದಾವಾ ದಾಖಲಾತಿ : ಬೆಳಗಾವಿ ವಿಭಾಗದಿಂದ 963 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 491 ಸೇರಿದಂತೆ ಒಟ್ಟು 1454 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 583 ಪ್ರಕರಣಗಳು ಇತ್ಯರ್ಥಗೊಂಡಿವೆ.

ಅಮಲ್ಜಾರಿ ಪ್ರಕರಣಗಳು : ಒಟ್ಟು 159 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 01 ಪ್ರಕರಣ ಇತ್ಯರ್ಥಗೊಂಡಿದೆ ಹಾಗೂ ಸಹಕಾರಿಗಳ ಸಹಾಯಕ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 104 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ವರ್ಗಾವಣೆಯಾಗಿರುತ್ತವೆ.

ಮಾರ್ಚ್ ಮಾಹೆಯ ತರಬೇತಿ ಕಾರ್ಯಕ್ರಮಗಳು :

ಮಾರ್ಚ್ 2017ರ ಮಾಹೆಯಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಇ–ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಎಸಿಸಿ ಕೇಂದ್ರಗಳಿಗೆ ತರಬೇತಿಗಳನ್ನು ಆಯೋಜಿಸಲಾಗಿದೆ.

ಕ್ರ.ಸಂ.	ದಿನಾಂಕ	ಭಾಗವಹಿಸಬೇಕಾದ ಜಿಲ್ಲೆಗಳು	ತರಬೇತಿಯ ಸ್ಥಳ
1.	03 ಮಾರ್ಚ್ 2017	ಬೆಂಗಳೂರು	ಆರ್‌ಐಸಿಎಂ, ಬೆಂಗಳೂರು.
2.	04 ಮಾರ್ಚ್ 2017	ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಕೋಲಾರ	ಆರ್‌ಐಸಿಎಂ, ಬೆಂಗಳೂರು.
3.	06 ಮಾರ್ಚ್ 2017	ಮೈಸೂರು, ಮಂಡ್ಯ, ಹಾಸನ ಹಾಗೂ ಮಡಿಕೇರಿ.	ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಭವನ, ಚಾಮರಾಜ ಜೋಡಿರಸ್ತೆ, ಮೈಸೂರು.
4.	07 ಮಾರ್ಚ್ 2017	ಉಡುಪಿ, ದಕ್ಷಿಣ ಕನ್ನಡ	ಕ್ಯಾಂಪ್ಕೋ ಲಿ., ಸಭಾಭವನ, ವಾರಣಾಸಿ ಟಾವರ್ಸ್, ಮಿಷನ್ ಸ್ಟ್ರೀಟ್, ಮಂಗಳೂರು.
5.	08 ಮಾರ್ಚ್ 2017	ಧಾರವಾಡ, ಗದಗ ಹಾಗೂ ಹಾವೇರಿ	ಹೋಟೆಲ್ ರೇವನಕರ ಕಂಫರ್ಟ್ಸ್, ಕೋರ್ಟ್ ಸರ್ಕಲ್ ಸಮೀಪ, ಟಿ.ಬಿ ರಸ್ತೆ, ದೇಶಪಾಂಡೆನಗರ, ಹುಬ್ಬಳ್ಳಿ.
6.	09 ಮಾರ್ಚ್ 2017	ಉತ್ತರ ಕನ್ನಡ	ಟಿ.ಎಂ.ಎಸ್. ಸಭಾ ಭವನ (ತಾಲ್ಲೂಕ ಅಗ್ರಿಕಲ್ಚರ್ ಪ್ರೊಡೆಕ್ಟ್ ಕೋ–ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ), ನ್ಯೂ ಮಾರ್ಕೆಟ್ ಯಾರ್ಡ್, ಮುಖ್ಯರಸ್ತೆ ಶಿರಸಿ.
7.	10 ಮಾರ್ಚ್ 2017	ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಹಾಗೂ ಚಿಕ್ಕಮಗಳೂರು	ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ, ಆರ್‌ಟಿಓ ರಸ್ತೆ, ಶಿವಮೊಗ್ಗ.
8.	14 ಮಾರ್ಚ್ 2017	ಬೆಳಗಾವಿ ಜಿಲ್ಲೆ (ಬೆಳಗಾವಿ, ಬೈಲಹೊಂಗಲ, ಖಾನಾಪೂರ ತಾಲ್ಲೂಕುಗಳು)	ಕನ್ನಡಸಾಹಿತ್ಯ ಭವನ, ಚೆನ್ನಮ್ಮ ಸರ್ಕಲ್, ಬೆಳಗಾವಿ.
9.	15 ಮಾರ್ಚ್ 2017	ಬೆಳಗಾವಿ ಜಿಲ್ಲೆ (ಗೋಕಾಕ, ಹುಕ್ಕೇರಿ, ಸವದತ್ತಿ, ರಾಮದುರ್ಗ ತಾಲ್ಲೂಕುಗಳು)	ಹೋಟೆಲ್ ಅನಮೋಲ್ ಲಾಡ್ಜ್ & ರೆಸ್ಟೋರೆಂಟ್, ಹೊಸಪೇಟ್ ಗಲ್ಲಿ, ಗೋಕಾಕ.
10.	16 ಮಾರ್ಚ್ 2017	ಬೆಳಗಾವಿ ಜಿಲ್ಲೆ (ಅಥಣಿ, ರಾಯಭಾಗ ಮತ್ತು ಚಿಕ್ಕೋಡಿ ತಾಲ್ಲೂಕುಗಳು)	ಹೋಟೆಲ್ ಹುಲಿಗೆಮ್ಮ ರೆಸಿಡೆನ್ಸಿ, ನಿಪ್ಪಾಣಿ–ಬಾಗಕೋಟೆ ರಸ್ತೆ, ಚಿಕ್ಕೋಡಿ.
11.	17 ಮಾರ್ಚ್ 2017	ವಿಜಯಪುರ, ಬಾಗಲಕೋಟೆ	ಹೋಟೇಲ್ ಶುಭಶ್ರೀ ಸಾಗರ, ಬಿಎಲ್‌ಡಿ ಮೆಡಿಕಲ್ ಕಾಲೇಜ್ ಹತ್ತಿರ, ವಿಜಯಪುರ.
12.	20 ಮಾರ್ಚ್ 2017	ಕಲಬುರಗಿ, ಯಾದಗಿರಿ, ಬೀದರ್	ಎಸ್.ಎಸ್.ಪಾಟೀಲ ಆಡಿಟೋರಿಮ್, ಛೇಂಬರ್ ಆಫ್ ಕಾಮರ್ಸ್, ಸೂಪರ್ ಮಾರ್ಕೆಟ್, ಕಲಬುರಗಿ.
13.	21 ಮಾರ್ಚ್ 2017	ರಾಯಚೂರು	ವಿನಯ ರೆಸಿಡೆನ್ಸಿ, ಗಂಗಾವತಿ ರಸ್ತೆ, ಸಿಂಧನೂರು.
14.	22 ಮಾರ್ಚ್ 2017	ಕೊಪ್ಪಳ, ಬಳ್ಳಾರಿ	ಹೋಟೆಲ್ ಸಿದ್ಧಾರ್ಥ ರೆಸಿಡೆನ್ಸಿ, ಸ್ಟೇಷನ್ ರೋಡ್, ಹೊಸಪೇಟೆ.

ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆಗಳು

ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟ ಸಹಕಾರಿಗೆ 3ನೇ ಬಾರಿ ಅಧ್ಯಕ್ಷರಾಗಿ ಶ್ರೀ ಎಸ್.ಆರ್. ಪಾಟೀಲರವರ ಅವಿರೋಧ ಆಯ್ಕೆ

ಶ್ರೀ ಎಸ್.ಆರ್.ಪಾಟೀಲ, ಅಧ್ಯಕ್ಷರು
ಮಾನ್ಯ ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರು

ಸಹಕಾರಿಯ ನಿರ್ದೇಶಕರುಗಳಾಗಿ ಶ್ರೀ ಎಸ್.ಕೆ.ಯಡಹಳ್ಳಿ, ಶ್ರೀ ಎ.ಎಂ. ಶೆಟ್ಟರ, ಶ್ರೀ ಟಿ.ಎಸ್.ಗಂಗಲ್ಲ, ಶ್ರೀ ಎಂ.ಬಿ.ಸೌದಾಗರ, ಶ್ರೀ ಎಸ್.ಬಿ.ಬೆಳಗಲಿ, ಶ್ರೀ ಎಲ್.ಕೆ.ಬಳಗಾನೂರ, ಶ್ರೀ ಸತೀಶ ಬಂಡಿವಡ್ಡರ, ಶ್ರೀ ಪರುತಗೌಡ ಪಾಟೀಲ, ಶ್ರೀ ಪಿ.ಆರ್.ಗೌಡರ, ಶ್ರೀಮತಿ ವಿಜಯಲಕ್ಷ್ಮೀ ಕುರ್ತಕೋಟಿ, ಶ್ರೀಮತಿ ಸಮತಾ ಪಾತ್ರೋಟ, ಶ್ರೀ ಸತೀಶ ತಳವಾರ, ಶ್ರೀ ಅಶೋಕ ಲಾಗಲೋಟಿ ಇವರುಗಳು ಆಯ್ಕೆಯಾಗಿರುತ್ತಾರೆ.

ಶ್ರೀ ಜಿ.ಎನ್.ಪಾಟೀಲ, ಉಪಾಧ್ಯಕ್ಷರು,
ಮಾನ್ಯ ಮಾಜಿ ಬಿ.ಟಿ.ಡಿ.ಎ. ಸಭಾಪತಿ

ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ

ಸಹಕಾರ ರತ್ನ
ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿ
ಅಧ್ಯಕ್ಷರು

ಶ್ರೀ ಎನ್.ಜಯ್ಯಣ್ಣ
ಉಪಾಧ್ಯಕ್ಷರು

ಆಡಳಿತ ಮಂಡಲಿಯ ನಿರ್ದೇಶಕರುಗಳಾಗಿ ಶ್ರೀ ಪಿ.ಎಲ್. ಸುರೇಶ್‌ರಾಜು, ಶ್ರೀ ರಘುರಾಮರೆಡ್ಡಿ, ಶ್ರೀ ಜಿ.ರಾಜಾನಾಯ್ಕ್, ಶ್ರೀ ಎಸ್.ವಿ.ನಾಗರಾಜಪ್ಪ, ಡಾ॥ ಕೆ.ಎಸ್.ಮುಕುಂದ ರಾವ್, ಶ್ರೀ ಕೆ.ಆನಂದ್, ಡಾ॥ ಡಿ.ರಾಮಚಂದ್ರ ನಾಯಕ, ಶ್ರೀ ಕೆ.ನಾಗರಾಜ್, ಶ್ರೀ ಕೆ.ಎನ್. ಸಕ್ರಪ್ಪ, ಶ್ರೀಮತಿ ಎಸ್.ಎಂ.ಉಷಾ ಮತ್ತು ಶ್ರೀಮತಿ ಎ.ಎಲ್. ಚಂದ್ರಿಕಾ ಇವರುಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಕೋಲಾರ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಅಧ್ಯಕ್ಷರು

ಶ್ರೀ ಬಿ.ಗೋವಿಂದಪ್ಪ
ಉಪಾಧ್ಯಕ್ಷರು

ಸಹಕಾರಿಯ ನಿರ್ದೇಶಕರುಗಳಾಗಿ ಶ್ರೀ ಖಾಸಿಂ ಸಾಬ್, ಶ್ರೀ ಬಿ.ಹೆಚ್.ಜಯರಾಮರೆಡ್ಡಿ, ಶ್ರೀ ಬಿ.ಅಭಿಲಾಷ್, ಶ್ರೀ ವಿಜಯ್ ಕುಮಾರ್ ಹುಲ್ಮನಿ, ಶ್ರೀ ಬಿ.ಹೆಚ್.ಪ್ರಕಾಶ್ ರೆಡ್ಡಿ, ಶ್ರೀ ಬಿ.ಆರ್. ಮಧು, ಶ್ರೀಮತಿ ಗಿರಿಜಾ ಮೋಹನ್, ಶ್ರೀಮತಿ ನಾಗರತ್ನ, ಶ್ರೀ ಕೆ.ಪಿ.ಲಕ್ಷ್ಮೀ ನಾರಾಯಣ್, ಶ್ರೀ ವಿ.ಎನ್.ರವಿಕುಮಾರ್ ಹಾಗೂ ಶ್ರೀ ರಾಘವೇಂದ್ರ ಪ್ರಸಾದ್ ಇವರುಗಳು ಆಯ್ಕೆಯಾಗಿದ್ದಾರೆ.

ಷ॥ ಬ್ರ॥ ಶ್ರೀ ಚಂದ್ರಮೌಳೀಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ಪ್ರತಿಷ್ಠಾನ ಅಭಿವೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ಹರಪನಹಳ್ಳಿ

ಶ್ರೀ ಟಿ.ಎಂ.ಚನ್ನವೀರಸ್ವಾಮಿ
ಅಧ್ಯಕ್ಷರು

ಶ್ರೀ ಟಿ.ಎಂ. ಆನಂದಯ್ಯ
ಉಪಾಧ್ಯಕ್ಷರು

ಶ್ರೀ ಗಣೇಶ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಉಡುಪಿ

ಶ್ರೀ ಸಿ.ಆರ್.ಪೈ
ಅಧ್ಯಕ್ಷರು

ಶ್ರೀ ಹೆಚ್.ಆರ್.ಶೆಣೈ
ಉಪಾಧ್ಯಕ್ಷರು

ಮಂಗಳೂರು ನ್ಯಾಯವಾದಿಗಳ ಸೌಹಾರ್ದ ಸಹಕಾರಿ ನಿ., ಮಂಗಳೂರು

ಶ್ರೀಮತಿ ಸುಮನ ಶರಣ್
ಅಧ್ಯಕ್ಷರು

ಶ್ರೀ ಅನಿಲ್ ಕುಮಾರ್ ಕೆ.
ಉಪಾಧ್ಯಕ್ಷರು

ಬಾಲಾಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹೊಸಪೇಟೆ

ಶ್ರೀ ಜೆ.ಎಸ್.ರಮೇಶ್ ಗುಪ್ತ
ಅಧ್ಯಕ್ಷರು

ಶ್ರೀಮತಿ ಎಂ.ರಾಜೇಶ್ವರಿ
ಉಪಾಧ್ಯಕ್ಷರು

ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆಗಳು

ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ

ಶ್ರೀ ಮಾಯಪ್ಪಾ ಹೊಳೆಪ್ಪಾ ಹೊಳೆಪ್ಪಗೋಳ, ಅಧ್ಯಕ್ಷರು

ಶ್ರೀಮತಿ ಪುಷ್ಪಾ ಜಯಪಾಲ ಚೌಗಲಾ
ಉಪಾಧ್ಯಕ್ಷರು

ಜನನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ ಅಧ್ಯಕ್ಷರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ನೂತನ ಅಧ್ಯಕ್ಷರಾಗಿ ಶ್ರೀ ಹೆಚ್.ಎಲ್. ಮಂಜಪ್ಪನವರ ಅವಿರೋಧ ಆಯ್ಕೆ.

ನಗದು ರಹಿತ ವ್ಯವಹಾರ ಮಾಹಿತಿ ಕಾರ್ಯಾಗಾರ

ಕೊಡಿಂಬಾಳ : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ), ಪುತ್ತೂರು ಇದರ ಆಶ್ರಯದಲ್ಲಿ ಸರಸ್ವತಿ ವಿದ್ಯಾಲಯ, ಕಡಬ ಮತ್ತು ಗ್ರಾಮ ವಿಕಾಸ ಸಮಿತಿ, ಕೊಡಿಂಬಾಳ ಇದರ ಸಹಭಾಗಿತ್ವದಲ್ಲಿ ದಿನಾಂಕ 18 ಫೆಬ್ರವರಿ 2017ರಂದು ಕೊಡಿಂಬಾಳ ಶ್ರೀ ರಾಮ ಭಜನಾ ಮಂದಿರದಲ್ಲಿ "ನಗದು ರಹಿತ ವ್ಯವಹಾರ ಮಾಹಿತಿ ಕಾರ್ಯಾಗಾರ"ವನ್ನು ಏರ್ಪಡಿಸಲಾಗಿತ್ತು.

ಅಧ್ಯಕ್ಷತೆಯನ್ನು ಸರಸ್ವತಿ ವಿದ್ಯಾಲಯದ ಅಧ್ಯಕ್ಷರಾದ ಶ್ರೀ ರವಿರಾಜ್ ಶೆಟ್ಟಿರವರು ವಹಿಸಿದ್ದರು. ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಉಪಾಧ್ಯಕ್ಷರಾದ ಶ್ರೀ ವಿನಯಕುಮಾರ್ ಕಂದಡ್ಕರವರು ನಗದು ರಹಿತ ವ್ಯವಹಾರದ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಸಹಕಾರಿಯ ಉದ್ಘಾಟನಾ ಕಾರ್ಯಕ್ರಮ

ಯಾದಗಿರಿ : ದಿನಾಂಕ 23 ಫೆಬ್ರವರಿ 2017ರಂದು ಶಹಾಪೂರ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಶಹಾಪೂರ ಸಹಕಾರಿಯನ್ನು ಶ್ರೀ ಶರಣಬಸಪ್ಪಗೌಡ ದರ್ಶನಾಪುರ, ಮಾನ್ಯ ಮಾಜಿ ಸಚಿವರು, ಕರ್ನಾಟಕ ಸರ್ಕಾರ ಇವರು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಭಾಗವಹಿಸಿ, ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಹಾಗೂ ಸಹಕಾರಿಯ ಆಡಳಿತ ಮಂಡಲಿ ಮತ್ತು ಸದಸ್ಯರುಗಳ ಜವಾಬ್ದಾರಿಯ ಬಗ್ಗೆ ಮಾಹಿತಿಯನ್ನು ನೀಡಿದರು. ಅಧ್ಯಕ್ಷತೆಯನ್ನು ಶ್ರೀ ಚಂದ್ರಶೇಖರ ಅರಬೋಳ ವಹಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಮತ್ತು ಶೇರುದಾರರು ಉಪಸ್ಥಿತರಿದ್ದರು.

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್‌ನ ಶಾಖೆಗಳ ಉದ್ಘಾಟನೆ

ಶಿರ್ವ : ಶಿರ್ವದಲ್ಲಿ ಸಹಕಾರಿಯ 47ನೇ ಶಾಖೆಯನ್ನು ವಂದನೀಯ ಫಾ. ಸ್ಟ್ಯಾನಿ ತಾವ್ರೋರವರ ಆಶೀರ್ವಚನ ದೊಂದಿಗೆ ವಂದನೀಯ ಫಾ. ರಿಚರ್ಡ್ ಅಲೋಶಿಯಸ್ ಕೂವೆಲ್ಲೋರವರಿಂದ ಉದ್ಘಾಟನೆ.

ಕಾರ್ಕಳ : ಕಾರ್ಕಳದಲ್ಲಿ ಸಹಕಾರಿಯ 48ನೇ ಶಾಖೆಯನ್ನು ವಂದನೀಯ ಬ್ಯಾಪ್ಟಿಸ್ಟ್ ಮಿನೇಜಸ್‌ರವರ ಆಶೀರ್ವಚನದೊಂದಿಗೆ ಕಾರ್ಕಳ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಹೆಚ್ ಗೋಪಾಲ್ ಭಂಡಾರಿಯವರಿಂದ ಉದ್ಘಾಟನೆ.

ನಿಮ್ಮ ಪ್ರಶ್ನೆ

ನಮ್ಮ ಉತ್ತರ

ಗುರುಪ್ರಸಾದ
ಅಧಿಕಾರಿ, ಕಾನೂನು ವಿಭಾಗ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

ಪ್ರಶ್ನೆ 01 : ಚುನಾವಣೆಗೆ ಸಂಬಂಧಿಸಿದ ಮಾಹಿತಿಯನ್ನು ಯಾರಿಗೆ ನೀಡಬೇಕು?

ಉತ್ತರ : ಸಹಕಾರಿಯ ಚುನಾವಣೆಯ ಕುರಿತಾದ ಮಾಹಿತಿಯನ್ನು ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರವು ಹೊರಡಿಸಿರುವ ಆದೇಶದಂತೆ (ಆದೇಶವನ್ನು ಪ್ರಾಧಿಕಾರದ ವೈಬ್‌ಸೈಟ್ : www.ceckar.in ನಲ್ಲಿ ಪಡೆಯಬಹುದಾಗಿದೆ) ಕಾರ್ಯವ್ಯಾಪ್ತಿಯ ಚುನಾವಣಾಧಿಕಾರಿಗಳಿಗೆ ಮಾಹಿತಿ ಸಲ್ಲಿಸಬೇಕು.

ಪ್ರಶ್ನೆ 02 : ಹೊಸದಾಗಿ ಚುನಾಯಿತರಾದ ಆಡಳಿತ ಮಂಡಲಿಯು ಯಾವಾಗ ಪದಧಾರಣೆ ಮಾಡಬೇಕು?

ಉತ್ತರ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 26(3)ರಲ್ಲಿ ಹೊಸದಾಗಿ ಚುನಾಯಿತರಾದ ಮಂಡಲಿಯ ನಿರ್ದೇಶಕರು, ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡತಕ್ಕದ್ದು ಎಂದಿರುತ್ತದೆ. ಅದರಂತೆ ಹಾಲಿ ಆಡಳಿತ ಮಂಡಲಿಯ ಪದಾವಧಿ ಮುಕ್ತಾಯವಾಗುವ ದಿನಾಂಕದಂದೇ ನೂತನ ಆಡಳಿತ ಮಂಡಲಿ ಪದಧಾರಣೆ ಮಾಡಬೇಕು.

ಪ್ರಶ್ನೆ 03 : ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆ ಎಷ್ಟಿರಬೇಕು?

ಉತ್ತರ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 24ರಂತೆ ಸಹಕಾರಿಯ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಆಡಳಿತ ಮಂಡಲಿಯ ಸದಸ್ಯರನ್ನು ಹೊಂದಿರಬೇಕು. ಅವುಗಳೆಂದರೆ;

(1) ಪ್ರಾಥಮಿಕ ಸಹಕಾರಿಯ ಮತ್ತು ಮಾಧ್ಯಮಿಕ ಸಹಕಾರಿಯ ಕಾರ್ಯಕ್ಷೇತ್ರವು – (2016ರ ತಿದ್ದುಪಡಿಯಂತೆ)

(ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದರೆ, ಹದಿಮೂರು ಸದಸ್ಯರು

(ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, ಹದಿನೈದು ಸದಸ್ಯರು

(ಸಿ) ತಾಲ್ಲೂಕನ್ನು ಮೀರಿ ವ್ಯಾಪಿಸಿದರೆ, ಹದಿನೇಳು ಸದಸ್ಯರು

(ಡಿ) ಒಕ್ಕೂಟ ಸಹಕಾರಿಯಾಗಿದ್ದಲ್ಲಿ, ಹತ್ತೊಂಭತ್ತು ಸದಸ್ಯರು

(ಇ) ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ, ಇಪ್ಪತ್ತೊಂದು ಸದಸ್ಯರು

ಪ್ರಶ್ನೆ 04 : ಸಹಕಾರಿಯ ಯಾವುದೇ ನಿರ್ದೇಶಕರು ಅನರ್ಹತೆ ಹೊಂದಿದ ಪಕ್ಷದಲ್ಲಿ ಆಡಳಿತ ಮಂಡಲಿಯಲ್ಲಿ ನಿರ್ಧರಿಸಿ ಅಂತಹ ನಿರ್ದೇಶಕರನ್ನು ಸಹಕಾರಿಯ ಆಡಳಿತ ಮಂಡಲಿಯಿಂದ ತೆಗೆದುಹಾಕಬಹುದೇ?

ಉತ್ತರ : ಇಲ್ಲ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25ರಲ್ಲಿ ತಿಳಿಸಿರುವ ಅನರ್ಹತೆಯನ್ನು ಸಹಕಾರಿಯ ಯಾವುದೇ ನಿರ್ದೇಶಕರು ಹೊಂದಿದ್ದಲ್ಲಿ ಅಂತಹ ನಿರ್ದೇಶಕರ ಕುರಿತಾದ ವಿವರವನ್ನು ಅಗತ್ಯ ದಾಖಲೆಗಳೊಂದಿಗೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 6ಜೆ(14)ರಡಿ ಸಂಯುಕ್ತ ಸಹಕಾರಿಗೆ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ವರದಿ ಮಾಡಬೇಕಾಗಿರುತ್ತದೆ. ಅಂತಹ ವರದಿಯ ಆಧಾರದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(4)ರಡಿ ನಿರ್ದೇಶಕರಿಗೆ ಕಾರಣಕೇಳಿ ನೋಟೀಸನ್ನು ಜಾರಿಗೊಳಿಸಿ, ಅಹವಾಲನ್ನು ಪಡೆದು ಈ ಕುರಿತಂತೆ ಸೂಕ್ತವಾಗಿ ತೀರ್ಮಾನಿಸುವ ಅಧಿಕಾರ ಸಂಯುಕ್ತ ಸಹಕಾರಿಗೆ ಪ್ರದತ್ತವಾಗಿದೆ.

(**ಗಮನಿಸಿ :** ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆಗೆ ಸಂಬಂಧಿಸಿದಂತೆ ಸಲ್ಲಿಸಬೇಕಾದ ದಾಖಲೆಗಳ ವಿವರಗಳ ಕುರಿತಂತೆ ದಿನಾಂಕ : 01 ಅಕ್ಟೋಬರ್ 2011ರ ಸುತ್ತೋಲೆ 6/2011–12ರಲ್ಲಿ ತಿಳಿಸಲಾಗಿರುತ್ತದೆ. ಸುತ್ತೋಲೆಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ : www.souharda.coopನಿಂದ ಪಡೆಯಬಹುದಾಗಿದೆ)

ಇವರೀರ್ವರು "ಗರ್ವಪಡದುಪಕಾರಿ ದರ್ಪಬಿಟ್ಟಧಿಕಾರಿ" ಅತಿಶಯರು

ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಗತಕಾಲದ ನೆನಪನ್ನು ಹುಡುಕ ಹೊರಟಾಗ ದಾನಕ್ಕೆ ಕರ್ಣನೆಂದೂ, ಧರ್ಮಕ್ಕೆ ಧರ್ಮರಾಜನೆಂದೂ, ಸತ್ಯಕ್ಕೆ ಹರಿಶ್ಚಂದ್ರನೆಂದೂ, ದೌರ್ಜನ್ಯಕ್ಕೆ ದುರ್ಯೋಧನ, ರಾವಣರೆಂದು ಖ್ಯಾತರಾಗಿದ್ದ ಕಾಲವಿತ್ತು. ಆದರೆ, ಇಂದಿನ ಅವಿರತ ದುಡಿಮೆಯ ಪೆಡಂಭೂತದ ಪದಾಘಾತಕ್ಕೆ ಸಿಲುಕಿ ಉಸಿರು ಕಟ್ಟಿಕೊಂಡಂತಿರುವ ಮಾನವನು ದೈವೀಗುಣಗಳೆಲ್ಲವನ್ನೂ ಮರೆತು, ಮಾನವತೆಯನ್ನೂ ಭ್ರಷ್ಟಗೊಳಿಸಿಕೊಂಡಿರುವುದಕ್ಕೆ ಆಧ್ಯಾತ್ಮಿಕ ಕೊರತೆಯೇ ಮುಖ್ಯ ಕಾರಣವೆಂದು ಚಿಂತನಾಶೀಲರು, ಆಧ್ಯಾತ್ಮಿಕ ಜೀವಿಗಳೂ ಆಗಿರುವ ಡಿ.ವಿ.ಜಿ.ಯವರು ಜೀವಿಗಳು ಜಗತ್ತಿನ ಜನಗಳ ಕಾರ್ಯವೈಖರಿಯಲ್ಲಿನ ನ್ಯೂನತೆಗಳನ್ನು ಕೆಳಗಿನ ಪದ್ಯದಲ್ಲಿ ನಮ್ಮ ಗಮನಕ್ಕೆ ತರುತ್ತಿದ್ದಾರೆ. ಅಂದರೆ,

"ಗರ್ವಪಡದುಪಕಾರಿ ದರ್ಪಬಿಟ್ಟಧಿಕಾರಿ
ನಿರ್ವಿಕಾರದ ನಯನದೊಳ್ ನೋಳ್ಪುದಾರಿ
ಸರ್ವಧರ್ಮಾಧಾರಿ ನಿರ್ವಾಣಸಂಚಾರಿ
ಉರ್ವರೆಗೆ ಗುರುವವನು ಮಂಕುತಿಮ್ಮ"

ಹುಟ್ಟಿದ ಪ್ರತಿ ಮನುಷ್ಯನು ತನ್ನ ಕಾರ್ಯಕ್ಷೇತ್ರದಲ್ಲಿದ್ದುಕೊಂಡು, ಕರ್ತವ್ಯಪರನಾಗಿ ಕಾರ್ಯನಿರ್ವಹಿಸುತ್ತಾ, ಇತರರಿಗೆ ತೊಂದರೆಯನ್ನು ಕೊಡದೇ ಬಾಳನ್ನು ನಿರ್ವಹಿಸುವುದರ ಜೊತೆಗೆ ಸಹನೆ, ಸಂಪನ್ನತೆ, ವಿನಯ, ವಿದ್ಯಾ ಮತ್ತು ನಿರ್ವಿಕಾರಗಳಿಂದ ಬದುಕಿ ಜೀವನದ ಅಂತಿಮ ಗುರಿಯಾದ ಮೋಕ್ಷವನ್ನು ಪಡೆಯಬೇಕೆಂಬುದು ಸರ್ವವಿಧಿತ. ಆದರೆ, ದೈನಂದಿನ ಜೀವನದಲ್ಲಿ ಜನರ ಕಾರ್ಯಶೈಲಿಯನ್ನು ಅವಲೋಕಿಸಲಾಗಿ ಯಾವುದಾದರೊಂದು ಕಿರುಕಾರ್ಯವೆನ್ನೆಸಗಿದರೂ ಅದರ ನಿರ್ವಹಣೆಯ ಸಂಬಂಧ ಮಿತಿಮೀರಿದ ಗರ್ವವನ್ನು ಪ್ರದರ್ಶಿಸುವ ಅಂಶವನ್ನು ಗಮನಿಸಬಹುದಾಗಿದೆ. ದೇವಸ್ಥಾನಕ್ಕೊಂದು ಕಿರುಗಂಟೆಯನ್ನು ಹಾಕಿಸಿದರೂ ಅದಕ್ಕೆ ದೊಡ್ಡದಾಗಿ ತನ್ನ ಹೆಸರನ್ನು ಬರೆಯಿಸಿಕೊಳ್ಳುವ ತವಕ, ಯಾರಿಗೋ ಒಂದು ನೌಕರಿ ಕೊಡಿಸಿದರೆ, ವರ್ಗಾವಣೆ ಮಾಡಿಸಿದರೆ, ವಧುವರರ ಲಭ್ಯತೆಯ ಬಗ್ಗೆ ಯತ್ನಿಸಿದ್ದಲ್ಲಿ ಅದೆಲ್ಲವನ್ನೂ ತಾನು ಮಾಡಿದೆನೆಂಬ ಅಹಂಭಾವದಿಂದ ಮೆರೆಯುವ ಜನರಿಗೆ ಕೊರತೆಯೇನಿಲ್ಲವೆಂಬುದನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ.

ಸುಖೀ ಸಮಾಜದ ನಿರ್ಮಾಣಕ್ಕಾಗಿ, ಮುಂಬರುವ ಪೀಳಿಗೆಗೆ ಉತ್ತಮ ಸಮಾಜದ ಬಳುವಳಿಯಾಗಿ ಪ್ರತಿಯೊಬ್ಬ ಪ್ರಜೆಯೂ ವಿದ್ಯಾವಿನಯ ಸಂಪನ್ನರಾಗಿ ಕಾರ್ಯೋನ್ಮಾಖರಾಗುವ ದಿಸೆಯಲ್ಲಿ ನೆರವು ನೀಡುವ ಬಗ್ಗೆ ಗರ್ವಪಡದೇ, ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ ಬಗ್ಗೆ ದರ್ಪವಿರದೇ, ಪಕ್ಷಪಾತ ಮತ್ತು ಬೇಧಗಳನ್ನು ತೊರೆದು ಸದ್ದೃಷ್ಟಿಯಿಂದ ಯಾವುದೇ ಕಾರ್ಯನಿರ್ವಹಿಸುವಂತಾದಲ್ಲಿ ಅಂತಹನೋರ್ವ "ಪ್ರಪಂಚದ ಗುರುವಿನ" ಹಂತ ತಲುಪಿದವನಾಗುತ್ತಾನೆಂದೂ ಧರ್ಮ ಬೇಧಗಳಿಲ್ಲದೇ ಸರ್ವರನ್ನು ಪ್ರೀತಿಸುವ "ಸರ್ವಧರ್ಮಾಧಾರಿ, ನಿರ್ವಾಣಸಂಚಾರಿ ಮಹಾತ್ಮ"ನಾಗುತ್ತಾನೆಂದು ತಿಳಿಸುತ್ತಾ ಇಂದಿದ್ದು ನಾಳೆಗೆ ಜೀವನಾಂತ್ಯ ಕಾಣುವ ಮಾನವರಾದ ನಾವುಗಳು ನಿಗರ್ವಿಗಳಾಗಿ ದರ್ಪವನ್ನು ಬಿಟ್ಟು ಸರ್ವಧರ್ಮಪ್ರೀತಿಯುಳ್ಳವರಾಗಿ ಮೋಕ್ಷ ಪಥದಲ್ಲಿ ನಡೆದು "ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳಿನ" ಸಹಕಾರ ತತ್ವವನ್ನು ನಿಜ ಜೀವನದಲ್ಲಿ ಅನುಷ್ಠಾನಗೊಳಿಸಿರೆಂಬುದೇ ಡಿ.ವಿ.ಜಿ.ಯವರ ಸದ್ಬಯಕೆಯಾಗಿದೆ.

Form IV (See Rule-8)

1.	Place of Publication	:	Bangalore
2.	Periodicity of its Publications	:	Monthly
3.	Printer's Name	:	Shakthi Printech, # 552/1, 7th Cross, 3rd Main, Ayyappa Temple Road, Prakash Nagar, Srirampura, Bengaluru, Karnataka - 560021
	Whether Citizen of India	:	Yes
	If foreigner, State the country of origin		
4.	Editor's Name	:	Sharangouda G. Patil
	Whether Citizen of India	:	Yes
	If foreigner, State the country of origin		
	Address	:	Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010
5.	Name and Address of individuals who own the Newspaper and partners or share holders holding more than percent of the total capital	:	Managing Director Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010

I, Sharangouda G. Patil here by declare that the particulars given above are true to the best of my knowledge and belief.

Date : 28/02/2017 **Sd/-**
Place : Bangalore **Signature of the Publisher / Editor**

ಸಹಕಾರ ಸಂಸ್ಥೆಗಳಲ್ಲಿ ಡಿಜಿಟಲ್ ಬ್ಯಾಂಕಿಂಗ್ ಅಗತ್ಯತೆ ಮತ್ತು ಬದಲಾವಣೆಯ ಪರ್ವಕ್ಕೆ ಸಿದ್ಧತೆ

ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

ಜನರು ಒಮ್ಮೆ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಗೆ ಹೊಂದಿಕೊಂಡರೆ ನಗದು ಹಣಕ್ಕೆ ಬೇಡಿಕೆ ಕಡಿಮೆಯಾಗುತ್ತದೆ ಮತ್ತು ಅದರ ಸಂಗ್ರಹವೂ ಕಡಿಮೆಯಾಗುತ್ತದೆ. ಹಾಗಾಗಿ ಬ್ಯಾಂಕ್‌ಗಳಲ್ಲಿ ಹೆಚ್ಚಿನ ಹಣ ಉಳಿದು ಉಳಿತಾಯಕ್ಕೆ ಅವಕಾಶವಾಗುತ್ತದೆ. ಇದರಿಂದಾಗಿ ಹಣಕಾಸು ವಹಿವಾಟು ಪಾರದರ್ಶಕವಾಗಿರುತ್ತದೆ. ಎಲ್ಲ ವಹಿವಾಟುಗಳನ್ನು ಸುಲಭವಾಗಿ ಕಂಡು ಹಿಡಿಯಬಹುದು. ಜನರ ಹಣ ಬ್ಯಾಂಕುಗಳಲ್ಲಿ ಸುರಕ್ಷಿತವಾಗಿರುತ್ತದೆ. ಸರ್ಕಾರಕ್ಕೆ ಹಣದ ಚಲಾವಣೆ ಬಗ್ಗೆ ಮಾಹಿತಿ ದೊರಕುತ್ತಿರುತ್ತದೆ. ಡಿಜಿಟಲ್ ಆರ್ಥಿಕತೆ ಬ್ಯಾಂಕಿಂಗ್ ಕ್ಷೇತ್ರಕ್ಕೆ ಒಳ್ಳೆಯದನ್ನು ಮಾಡುತ್ತದೆ.

ನವೆಂಬರ್ 1... ಕನ್ನಡ ರಾಜ್ಯೋತ್ಸವ. ನವೆಂಬರ್ 14... ಸಹಕಾರ ಸಪ್ತಾಹದ ಮೊದಲ ದಿನ. ಇವೆರಡೂ ನವೆಂಬರ್ ತಿಂಗಳ ಮಹತ್ವದ ದಿನಾಂಕಗಳು. ಆದರೆ... ಈ ಎರಡು ದಿನಾಂಕಗಳಿಗಿಂತಲೂ ಹೆಚ್ಚಿನ ಮಹತ್ತತೆಯನ್ನು ಪಡೆದ ದಿನಾಂಕ... ನವೆಂಬರ್ 8...!

ನವೆಂಬರ್ 8, 2016: ದೇಶದಲ್ಲಿಯೇ ಸಂಚಲನ ಮೂಡಿಸಿದ ದಿನ. ದೇಶದ ಪ್ರಧಾನ ಮಂತ್ರಿಗಳಿಂದ ಹಿಡಿದು, ಕಟ್ಟಕಡೆಯ ಪ್ರಜೆಯೂ ಕೂಡಾ ಗಂಭೀರವಾಗಿ ಚಿಂತಿಸಿದ ದಿನ.

ಹಾಗಾದರೆ ನವೆಂಬರ್ 8, ನಡೆದದ್ದಾದರೂ ಏನು...?

- **ಮಧ್ಯಾಹ್ನ :** ಪ್ರಧಾನ ಮಂತ್ರಿಗಳ ಕಛೇರಿಯಿಂದ "ಸಂಜೆ 7 ಗಂಟೆಗೆ ಪ್ರಧಾನಿಯ ಸಮ್ಮುಖದಲ್ಲಿ ಒಂದು ಮಹತ್ವದ ಸಭೆ ನಡೆಯಲಿದೆ. ಎಲ್ಲರೂ ಖುದ್ದು ಹಾಜರಿರಬೇಕು. ಈ ಸಂಬಂಧ ಏನನ್ನೂ ಎಲ್ಲೂ ಹೇಳಕೂಡದು. ಹಾಗೆಯೇ ಸಭೆಗೆ ಬರುವವರು ತಮ್ಮ ಮೊಬೈಲುಗಳನ್ನು ಬಿಟ್ಟು ಬರಬೇಕು" ಎಂದು ಕ್ಯಾಬಿನೆಟ್ ಸಚಿವರೆಲ್ಲರಿಗೂ ಮೆಸೇಜ್ ಹೋಯಿತು.
- **ಸಂಜೆ 7 ಗಂಟೆ :** "500 ರೂ. ಮತ್ತು 1000 ರೂ. ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸುವ ನಿರ್ಣಯವನ್ನು ಇನ್ನೇನು ಒಂದು ತಾಸಿನಲ್ಲಿ ದೇಶವೇ ಕೇಳಿಸಿಕೊಳ್ಳಲಿದೆ. 9 ಗಂಟೆಯವರೆಗೆ ಯಾರೊಬ್ಬರೂ ಹೊರಹೋಗಬಾರದು" ಎಂದು ಪ್ರಧಾನಿಯವರು ಸಭೆಗೆ ತಿಳಿಸಿದರು.
- **ರಾತ್ರಿ 8 ಗಂಟೆ :** ಪ್ರಧಾನಿಗಳು ಟಿವಿ ಪರದೆಯಲ್ಲಿ ಕಾಣಿಸಿಕೊಂಡು "ಇನ್ನು ನಾಲ್ಕು ಗಂಟೆಗಳ ಹೊತ್ತಿನಲ್ಲಿ, ಅಂದರೆ ಮಧ್ಯರಾತ್ರಿ ಹನ್ನೆರಡು ಗಂಟೆಯಾಗುವಷ್ಟರಲ್ಲಿ 500ರೂ. ಮತ್ತು 1,000 ರೂ. ಮುಖಬೆಲೆಯ ಎರಡು ನೋಟುಗಳು ಬೆಲೆ ಕಳೆದುಕೊಳ್ಳಲಿವೆ" ಎಂದು ದೇಶದ ಜನತೆಗೆ ತಿಳಿಸಿದರು.

ಅಷ್ಟು ಹೊತ್ತಿಗೆ ದೇಶದ ಎಲ್ಲ ಬ್ಯಾಂಕ್‌ಗಳು ಬಾಗಿಲು ಹಾಕಿದ್ದವು. ಪ್ರಮುಖ ಸರಕಾರಿ ಸಂಸ್ಥೆಗಳೆಲ್ಲ ಬಾಗಿಲು ಮುಚ್ಚಿದ್ದವು. ಹಾಗಾಗಿ ಯಾರಿಗೂ... ಪ್ರತಿತಂತ್ರವನ್ನು ಹೂಡಲು ಅವಕಾಶವೇ ಇರಲಿಲ್ಲ. ಏನು ಮಾಡಬೇಕು ಎಂಬುದು ತಿಳಿಯದೆ ಕೆಲವರ ಮಿದುಳು ಐಸಿನಲ್ಲಿಟ್ಟ ಹೂಕೋಸಿನಂತಾಗಿತ್ತು. "ಸರ್ಜಿಕಲ್ ಸ್ಟ್ರೈಕ್" ಎಂದರೆ ಇದು...!

ಇದರಿಂದ ಏನಾಗುತ್ತದೆ...? : ಸರ್ಕಾರದ ಒಟ್ಟು ಹಣದ ಶೇ.25 ರಿಂದ 30ರಷ್ಟಿದ್ದ ಕಪ್ಪು ಹಣದಲ್ಲಿ, ಶೇ.90ರಷ್ಟು ಹಣ ಸರ್ಕಾರಕ್ಕೆ ಬರುತ್ತದೆ. ಇಷ್ಟು ದಿನ ಕೂಡಿಟ್ಟ ದುಡ್ಡು ಚಲಾವಣೆಗೆ ಬರುತ್ತದೆ. ಹಣಕಾಸಿನ ಚಲಾವಣೆ ದೇಶದ ಆರ್ಥಿಕ ಸ್ಥಿತಿಗೆ ಒಳ್ಳೆಯದು. ಸರ್ಕಾರದ ವಿರುದ್ಧ ಕೆಲಸ ಮಾಡುವ ಭಯೋತ್ಪಾದನಾ ಚಟುವಟಿಕೆಗಳಿಗೆ ಹಣ ದೊರೆಯದೆ, ಬ್ರೇಕ್ ಹಾಕಿದಂತಾಗುತ್ತದೆ. ಡ್ರಗ್ಸ್ ಮಾಫಿಯಾಕ್ಕೂ ದೊಡ್ಡ ಹೊಡೆತ ಬೀಳುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಕಳ್ಳ

ನೋಟುಗಳನ್ನು ಮುದ್ರಿಸುವವರು ತಡಕಾಡಬೇಕಾಗುತ್ತದೆ. 500 ರೂ. ಮತ್ತು 1000 ರೂ. ಮುಖಬೆಲೆಯ ಈ ಎರಡು ನಿರ್ದಿಷ್ಟ ನೋಟುಗಳು ಅಮಾನ್ಯಗೊಂಡು 2017ರ ಫೆಬ್ರವರಿ ಅಂತ್ಯಕ್ಕೆ 112 ದಿನಗಳಾಗುತ್ತವೆ. ಈ ಅಮಾನ್ಯತೆಯ ಹಿಂದಿನ ಪ್ರಮುಖ ಉದ್ದೇಶ... ನಗದುರಹಿತ ಆರ್ಥಿಕತೆಗೆ ಬುನಾದಿ ಹಾಕುವುದು.

ನೋಟುಗಳ ಅಮಾನ್ಯತೆಯಿಂದಾಗಿ ದೇಶದ ಹೆಚ್ಚು ಜನರು ಮೊಬೈಲ್ ಬ್ಯಾಂಕಿಂಗ್ ಮತ್ತು ಆನ್‌ಲೈನ್ ಕಡೆ ಗಮನಹರಿಸುವಂತಾಯಿತು. ಎಷ್ಟೋ ಜನರು ATMಗಳ ಮುಂದೆ ಕ್ಯೂ ನಿಂತು ತಮ್ಮ ಕ್ರೆಡಿಟ್/ ಡೆಬಿಟ್ ಕಾರ್ಡುಗಳ ಮೂಲಕ ಹಣದ ಅವಶ್ಯಕತೆಯನ್ನು ಹೇಗೋ ಪೂರೈಸಿಕೊಂಡರು. ಇದರಿಂದಾಗಿ ದೇಶದಲ್ಲಿ ನಗದು ರಹಿತ ಆರ್ಥಿಕ ವ್ಯವಸ್ಥೆಯ ಕಡೆ ಜನ ವಾಲುತ್ತಿರುವುದು... ಇಂದಿನ ಬದಲಾದ ಸನ್ನಿವೇಶ. ನಗದುರಹಿತ ಆರ್ಥಿಕ ವ್ಯವಸ್ಥೆಯು ಕಾಗದದ ಹಣದಿಂದ ಡಿಜಿಟಲ್ ಹಣಕ್ಕೆ ಬದಲಾವಣೆಯಾಗುವ ಕ್ರಾಂತಿಕಾರಿ ಕ್ರಮವಾಗಿದೆ. ಇದರಿಂದಾಗಿ... ಎಲ್ಲ ರೀತಿಯ ಹಣಕಾಸಿನ ವ್ಯವಹಾರಗಳು ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್, ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಅಥವಾ ಆನ್‌ಲೈನ್ ಖರೀದಿಗಳ ಮುಖಾಂತರವೇ ನಡೆಯುತ್ತವೆ. ಬಿಲ್‌ಗಳ ಪಾವತಿ ಇರಬಹುದು, ಹಣ್ಣು-ತರಕಾರಿ ಖರೀದಿ ಇರಬಹುದು, ಬಸ್ ಅಥವಾ ಟ್ಯಾಕ್ಸಿ ಸಂಚಾರವಿರಬಹುದು, ಇನ್ನಿತರ ಯಾವುದೇ ವ್ಯವಹಾರವಿದ್ದರೂ ಕಾರ್ಡುಗಳು ಅಥವಾ ಡಿಜಿಟಲ್ ವ್ಯವಹಾರದ ಮುಖಾಂತರವೇ ನಡೆಯಬೇಕಾಗುತ್ತದೆ. ಇದನ್ನು ಡಿಜಿಟಲ್ ಬ್ಯಾಂಕಿಂಗ್ ಎಂಬ ಇನ್ನೊಂದು ಹೆಸರಿನಲ್ಲೂ ಕರೆಯಲಾಗಿದೆ.

ಜನರು ಒಮ್ಮೆ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಗೆ ಹೊಂದಿಕೊಂಡರೆ ನಗದು ಹಣಕ್ಕೆ ಬೇಡಿಕೆ ಕಡಿಮೆಯಾಗುತ್ತದೆ ಮತ್ತು ಅದರ ಸಂಗ್ರಹವೂ ಕಡಿಮೆಯಾಗುತ್ತದೆ. ಹಾಗಾಗಿ ಬ್ಯಾಂಕ್‌ಗಳಲ್ಲಿ ಹೆಚ್ಚಿನ ಹಣ ಉಳಿದು ಉಳಿತಾಯಕ್ಕೆ ಅವಕಾಶವಾಗುತ್ತದೆ. ಇದರಿಂದಾಗಿ ಹಣಕಾಸು ವಹಿವಾಟು ಪಾರದರ್ಶಕವಾಗಿರುತ್ತದೆ. ಎಲ್ಲ ವಹಿವಾಟುಗಳನ್ನು ಸುಲಭವಾಗಿ ಕಂಡು ಹಿಡಿಯಬಹುದು. ಜನರ ಹಣ ಬ್ಯಾಂಕುಗಳಲ್ಲಿ

ಸುರಕ್ಷಿತವಾಗಿರುತ್ತದೆ. ಸರ್ಕಾರಕ್ಕೆ ಹಣದ ಚಲಾವಣೆ ಬಗ್ಗೆ ಮಾಹಿತಿ ದೊರಕುತ್ತಿರುತ್ತದೆ. ಡಿಜಿಟಲ್ ಆರ್ಥಿಕತೆ ಬ್ಯಾಂಕಿಂಗ್ ಕ್ಷೇತ್ರಕ್ಕೆ ಒಳ್ಳೆಯದನ್ನು ಮಾಡುತ್ತದೆ.

"ಅತ್ಯಲ್ಪ ಹಣದ ಆರ್ಥಿಕತೆ" ಕೆಲವು ದೇಶಗಳಲ್ಲಿ ಚಾಲ್ತಿಯಲ್ಲಿದೆ: ಉದಾ ಸ್ವೀಡನ್, ಒಂದು ಕಾಲದಲ್ಲಿ ಆಧುನಿಕ ನೋಟ್ ಪದ್ಧತಿಯನ್ನು ಜಗತ್ತಿಗೆ ಪರಿಚಯಿಸಿದ ಸ್ವೀಡನ್, ಇಂದು ಒಂದು ಕ್ಯಾಶ್‌ಲೆಸ್ ಸೊಸೈಟಿ ಎನಿಸಿಕೊಂಡಿದೆ. ಅಲ್ಲಿನ ಬಸ್ಸು, ಕಾರು, ಟ್ರೇನುಗಳಲ್ಲಿ ನಗದು ಹಣವನ್ನು ಸ್ವೀಕರಿಸುವುದಿಲ್ಲ. ಅಂಗಡಿ ಮುಂಗಟ್ಟುಗಳು ಬಿಡಿ, ದೇಶದ ಅರ್ಧಕ್ಕರ್ಧ ಬ್ಯಾಂಕುಗಳೇ ನಗದು ಡಿಪಾಸಿಟ್‌ಗೆ ಅವಕಾಶ ಕೊಡುವುದಿಲ್ಲ. 2014ರಲ್ಲಿ ಈ ದೇಶದಲ್ಲಿ ನಡೆದ ಎಲ್ಲ ರೀಟೇಲ್ ವ್ಯವಹಾರದ ಪೈಕಿ 1/5 ರಷ್ಟು ಮಾತ್ರ ನಗದಿನ ರೂಪದಲ್ಲಿತ್ತು. ಮಿಕ್ಕಿದ್ದೆಲ್ಲವೂ ಕ್ಯಾಶ್‌ಲೆಸ್. ಅಲ್ಲಿ ದರೋಡೆಕೋರರು ಬ್ಯಾಂಕ್ ಕಡೆ ತಲೆ ಹಾಕಿ ಮಲಗುವುದಿಲ್ಲ. ಏಕೆಂದರೆ ಎಷ್ಟು ಕಷ್ಟಪಟ್ಟು ದರೋಡೆ ಮಾಡಿದರು ಕ್ಯಾಶ್ ಸಿಗುವುದಿಲ್ಲ.

ಇಂದಿನ ಜಾಗತೀಕರಣದ ಯುಗದಲ್ಲಿ, ಅತ್ಯಾಧುನಿಕ ತಂತ್ರಜ್ಞಾನಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಬಳಸುತ್ತಿರುವ ಈ ಕಾಲಘಟ್ಟದಲ್ಲಿ, ಹಣಕಾಸು ವಹಿವಾಟುಗಳನ್ನು ನಡೆಸಲು ನಗದು ಹಣದ ಬಳಕೆಗೆ ಪರ್ಯಾವಾಗಿ ಹಲವಾರು ಉತ್ತಮ ಹಾಗೂ ಸುರಕ್ಷಿತ ಮಾರ್ಗಗಳು ಲಭ್ಯವಿರುತ್ತವೆ. ಈ ರೀತಿಯ ಪರ್ಯಾಯ ಮಾರ್ಗಗಳನ್ನು ಬಳಸಿಕೊಳ್ಳಲು ಸರಳ ವಿಧಾನಗಳನ್ನು ರೂಪಿಸಲಾಗಿದೆ. ಹೀಗಾಗಿ ಹಣ ಪಾವತಿ ಮಾಡುವ ಹಾಗೂ ಹಣ ಪಡೆಯುವ ಚಟುವಟಿಕೆಗಳನ್ನು ತಂತ್ರಜ್ಞಾನದ ಮೂಲಕ ಸುಲಭವಾಗಿ ನಿರ್ವಹಿಸುವ ಅವಕಾಶಗಳು ಬಹಳಷ್ಟಿವೆ.

ಅನೇಕ ಕ್ಷೇತ್ರಗಳಲ್ಲಿ ಬದಲಾವಣೆಯ ಪರ್ವ ಆರಂಭವಾಗಿದೆ : ಭಾರತದಲ್ಲಿ RTGS ಮತ್ತು NEFT ಮೂಲಕ ಎಲ್ಲ ವರ್ಗಗಳ ಜನರು ಹಣ ವರ್ಗಾವಣೆ ಮಾಡುವುದು 2013 ರಿಂದ 2016ರ ಅವಧಿಯಲ್ಲಿ ಮೂರು ಪಟ್ಟು ಹೆಚ್ಚಾಗಿದ್ದು, ಇದೇ ಅವಧಿಯಲ್ಲಿ ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಹಣ ವರ್ಗಾವಣೆ ಮಾಡುವುದು ಏಳು ಪಟ್ಟು ಹೆಚ್ಚಾಗಿದೆ. ಎಟಿಎಂ ಮತ್ತು ಪಿಓಎಸ್ ಕಾರ್ಡ್ ಮೂಲಕ ವ್ಯವಹಾರ ನಡೆಸುವುದು ಗಣನೀಯವಾಗಿ ವೃದ್ಧಿಯಾಗಿದೆ. ವೇಗವಾಗಿ ನಗದು ರಹಿತವಾಗಿ ಹಣ ಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತಂದು ದಕ್ಷತೆಯನ್ನು ಹೆಚ್ಚಿಸಿಕೊಂಡು, ಎಲ್‌ಪಿಜಿ ಬಳಕೆದಾರರ ಸಬ್ಸಿಡಿ ಮತ್ತು ನರೇಗಾ ಪಾವತಿ ಮುಂತಾದ ಜನಕಲ್ಯಾಣ ಸೇವೆಗಳನ್ನು ಬ್ಯಾಂಕ್ ಖಾತೆಗಳ ಮೂಲಕ ತಲುಪಿಸಲು ಬಳಸಿಕೊಳ್ಳಲಾಗುತ್ತಿದೆ. ನೋಟುಗಳ ಕೌಂಟಿಂಗ್ ಮೆಷಿನ್‌ಗಳಿಗೆ ಗುಡ್‌ಬೈ ಹೇಳುವ ಕಾಲ ಬಂದಿದೆ. ಪಿಗ್ಮಿ ಏಜೆಂಟ್‌ಗಳ ಅವಶ್ಯಕತೆ ಕಡಿಮೆಯಾಗುತ್ತದೆ.

ಸಾರ್ವಜನಿಕ ವಿಮಾ ಕಂಪನಿಗಳ ಗ್ರಾಹಕರ ಪೋರ್ಟಲ್‌ಗಳ ಮೂಲಕ ಹೊಸ ಪಾಲಿಸಿ ಖರೀದಿಸಿದರೆ ಅಥವಾ ಕಂತು ತುಂಬಿದರೆ ಶೇ.10ರವರೆಗೂ ರಿಯಾಯಿತಿ ದೊರೆಯಲಿದೆ. ಡೆಬಿಟ್, ಕ್ರೆಡಿಟ್ ಕಾರ್ಡ್ ಅಥವಾ ಯಾವುದೇ ನಗದು ರಹಿತ ವಹಿವಾಟಿನ ಮೂಲಕ ಬಂಕ್‌ಗಳಲ್ಲಿ 100 ರೂ. ಪೆಟ್ರೋಲ್ ಅಥವಾ ಡಿಸೇಲ್ ಖರೀದಿಸಿದರೆ 75 ಪೈಸೆ ಉಳಿತಾಯವಾಗಲಿದೆ. ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಇರುವ ಟೋಲ್ ಕೇಂದ್ರಗಳಲ್ಲಿ ಆರ್‌ಎಫ್‌ಐಡಿ ಬಳಕೆ ಮಾಡಿದರೆ ಶೇ.10 ರಿಯಾಯಿತಿ ಲಭ್ಯವಿದೆ. ಆನ್‌ಲೈನ್ ಮೂಲಕ ರೈಲು ಟಿಕೇಟ್ ಖರೀದಿಸಿದರೆ ರೂ. 10 ಲಕ್ಷದವರೆಗಿನ ಅಪಘಾತ ವಿಮೆ ಸೌಲಭ್ಯ ಸಿಗಲಿದೆ. ಅಡುಗೆ ಅನಿಲಕ್ಕಾಗಿ ಆನ್‌ಲೈನ್ ಮೂಲಕ ಹಣ ಪಾವತಿಸಿದರೆ 5 ರೂ. ರಿಯಾಯಿತಿ ನೀಡಲಾಗುತ್ತಿದೆ. ಸಹಕಾರ ಸಂಸ್ಥೆಗಳು ಕೂಡಾ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಪೂರಕವಾದ ವಾತಾವರಣ ಕಂಡುಬರುತ್ತಿದೆ. ಈ ಬಗ್ಗೆ ಒಂದೆರಡು ಉದಾಹರಣೆಗಳನ್ನು ಗಮನಿಸಬಹುದಾಗಿದೆ :

- ದೇಶದ 63 ಸಾವಿರ ಪ್ಯಾಕ್ಸ್‌ಗಳನ್ನು ಮತ್ತು ಜಿಲ್ಲಾ ಬ್ಯಾಂಕುಗಳನ್ನು 3 ವರ್ಷಗಳಲ್ಲಿ ಸಂಪೂರ್ಣ ಗಣಕೀಕರಣಗೊಳಿಸಲು ನಬಾರ್ಡ್ ಮೂಲಕ ರೂ. 1900 ಕೋಟಿ ಆರ್ಥಿಕ ನೆರವನ್ನು 2017-18ರ ಕೇಂದ್ರ ಬಜೆಟ್‌ನಲ್ಲಿ ಒದಗಿಸಲಾಗಿದೆ. ಪ್ಯಾಕ್ಸ್‌ಗಳಲ್ಲಿ Micro ATM ಗಳು ಬರಲಿವೆ. ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳಲ್ಲಿ ಸ್ವೈಪಿಂಗ್ ಮೆಷಿನ್ ಸ್ಥಾಪಿಸಲಾಗುತ್ತದೆ. ನಬಾರ್ಡ್ ಸಹಯೋಗದಲ್ಲಿ ಗ್ರಾಮೀಣ ಹಾಗೂ ಸ್ಥಳೀಯ ಬ್ಯಾಂಕುಗಳ ಮೂಲಕ 4.32 ಕೋಟಿ ರುಪೇ ಡೆಬಿಟ್ ಕಾರ್ಡ್ ವಿತರಿಸಲು ನಿರ್ಧರಿಸಲಾಗಿದೆ.
- 2017-18ರ ಕೇಂದ್ರ ಬಜೆಟ್‌ನಲ್ಲಿ... ಗ್ರಾಮ, ಉಪನಗರಗಳಲ್ಲಿ ಡಿಜಿಟಲ್ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ. ಡಿಜಿಟಲ್ ವ್ಯವಸ್ಥೆಯ ಮೂಲಕ ಪಾರದರ್ಶಕ ಆಡಳಿತ ನೀಡಲು ಆದ್ಯತೆ ನೀಡಲಾಗಿದೆ.
- ರಾಜ್ಯದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಹೇಳಿಕೆ ಪ್ರಕಾರ ಮಾರ್ಚ್ 2017ರ ವೇಳೆಗೆ ಕನಿಷ್ಠ 100 ಗ್ರಾಮಗಳು ನಗದು ರಹಿತವಾಗುತ್ತವೆ ಹಾಗೂ 2019ರ ಹೊತ್ತಿಗೆ ಕರ್ನಾಟಕದ ಎಲ್ಲಾ ಗ್ರಾಮಗಳೂ ನಗದು ರಹಿತವಾಗುತ್ತವೆ.
- ಉಡುಪಿ ಜಿಲ್ಲೆಯ 158 ಗ್ರಾಮ ಪಂಚಾಯಿತಿಗಳು ನಗದು ರಹಿತ ವ್ಯವಹಾರಗಳನ್ನು ಮಾಡಲು ಯೋಜನೆಯನ್ನು ಸಿದ್ಧಗೊಳಿಸಲಾಗಿದೆ. 321 ಕುಟುಂಬಗಳು ವಾಸಿಸುತ್ತಿರುವ ಕುಂದಾಪುರ ತಾಲ್ಲೂಕಿನ ಹಲ್ಲಾಡಿ ಗ್ರಾಮವನ್ನು ಉಡುಪಿ ಜಿಲ್ಲೆಯ ಮೊದಲ ನಗದುರಹಿತ ಗ್ರಾಮ ಎಂದು ಶೀಘ್ರದಲ್ಲಿ ಘೋಷಿಸಲಾಗುತ್ತಿದೆ.
- ರಾಮನಗರ ಜಿಲ್ಲೆಯ ನಾಲ್ಕು ಗ್ರಾಮಗಳ ಎಲ್ಲ ವಹಿವಾಟುಗಳನ್ನು ನಗದು ರಹಿತಗೊಳಿಸುವ ಕಾರ್ಯ ಪ್ರಾರಂಭಗೊಂಡಿದೆ.
- ಮಂಡ್ಯ ಜಿಲ್ಲೆಯ ಎಂಟು ಗ್ರಾಮಗಳ ಎಲ್ಲ ವಹಿವಾಟುಗಳನ್ನು ನಗದು ರಹಿತಗೊಳಿಸುವ ಕಾರ್ಯ ಆರಂಭಗೊಂಡಿದ್ದು, ಚಂದಗಾಲು ಹಳ್ಳಿಯು ಮಂಡ್ಯ ಜಿಲ್ಲೆಯ ಮೊದಲ ನಗದು ರಹಿತ ಗ್ರಾಮ ಎಂದು ಘೋಷಿತಗೊಂಡಿರುತ್ತದೆ.
- ಧಾರಾವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಶೇರವಾಡ ಗ್ರಾಮವನ್ನು ಈ ಜಿಲ್ಲೆಯ ಮೊದಲ ನಗದು ರಹಿತ ಗ್ರಾಮ ಎಂದು ಘೋಷಿಸಲಾಗಿರುತ್ತದೆ. 4415 ಜನಸಂಖ್ಯೆ ಇರುವ ಈ ಗ್ರಾಮದಲ್ಲಿ 4003 ಜನರು ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, 3916 ಖಾತೆಗಳಿಗೆ ಆಧಾರ್ ಸಂಖ್ಯೆ ಇರುತ್ತದೆ ಮತ್ತು 3803 ರುಪೇ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಧಾರಾವಾಡ ಜಿಲ್ಲೆಯ ಒಂಬತ್ತು ಗ್ರಾಮಗಳನ್ನು ಶೀಘ್ರದಲ್ಲಿ ನಗದು ರಹಿತ ಗ್ರಾಮಗಳು ಎಂದು ಘೋಷಿಸಲಾಗುತ್ತಿದೆ.
- ಈಗಾಗಲೇ ನಾವು ನೋಡುತ್ತಿರುವಂತೆ, ರಸ್ತೆ ಬದಿಯ ವ್ಯಾಪಾರಿಗಳು, ಸಣ್ಣ ವರ್ತಕರು ಡಿಜಿಟಲ್ ಮಾಧ್ಯಮದ ಮೂಲಕ ವ್ಯಾಪಾರ ವಹಿವಾಟು ನಡೆಸುತ್ತಿರುವ ಬಗ್ಗೆ ಸುದ್ದಿಗಳನ್ನು ಓದುತ್ತಿದ್ದೇವೆ.

ಸಹಕಾರ ಸಂಸ್ಥೆಗಳು ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಇದು ಅನಿವಾರ್ಯವೂ ಆಗಿದೆ.

ಸಹಕಾರ ಸಂಸ್ಥೆ ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಒಂದು ವ್ಯಾವಹಾರಿಕ ಸಂಸ್ಥೆ. ವ್ಯವಹಾರ ಎಂದರೆ ಬ್ಯುಸಿನೆಸ್. ಬ್ಯುಸಿನೆಸ್ ಎಂದರೆ ಜನ. ಈ ಜನರೊಂದಿಗೆ ಸಹಕಾರ ಸಂಸ್ಥೆ ವ್ಯವಹರಿಸಬೇಕಾಗುತ್ತದೆ. ಈ ಜನ ಈಗಾಗಲೇ ನಗದು ರಹಿತ ವ್ಯವಸ್ಥೆಗೆ ಹೊಂದಿಕೊಳ್ಳುತ್ತಿರುವುದರಿಂದ ಸಹಕಾರ ಸಂಸ್ಥೆಗಳೂ ಕೂಡಾ ಬದಲಾವಣೆಗೆ ಹೊಂದಿಕೊಳ್ಳಬೇಕಾಗುತ್ತದೆ.

ಇಂಡಸ್‌ಇಂಡ್ ಬ್ಯಾಂಕ್ ಈಗಾಗಲೇ ಬಯೋ-ಮೆಟ್ರಿಕ್ ಎಟಿಎಂ ಪ್ರಾರಂಭಿಸಿದೆ. ಪಾಸ್‌ವರ್ಡ್ ಬೇಕಿಲ್ಲ. ಡೆಬಿಟ್/ ಕ್ರೆಡಿಟ್ ಕಾರ್ಡ್ ಅವಶ್ಯಕತೆ ಇಲ್ಲ. ತೋರುಬೆರಳಿನ ತುದಿ ಒತ್ತಿದರೆ ಸಾಕು. ಸುರಕ್ಷೆಯೂ ಹೌದು, ಸುಲಭವೂ ಹೌದು. ಅದೇ ರೀತಿ ಸೆಪ್ಟೆಂಬರ್ 2016 ರಿಂದ ಅಂಚೆ ಕಛೇರಿಗಳು ಪೋಸ್ಟ್ ಬ್ಯಾಂಕ್ ಆಫ್ ಇಂಡಿಯಾ ಹೆಸರಿನಲ್ಲಿ ಕೆಲಸ ಪ್ರಾರಂಭಿಸಿವೆ. ಸುಮಾರು 1.5 ಲಕ್ಷ ಶಾಖೆಗಳನ್ನು ಹೊಂದಿರುವ ಈ ಸಂಸ್ಥೆ ಆನ್‌ಲೈನ್ ಬ್ಯಾಂಕಿಂಗ್ ಮೂಲಕ ಜನರಿಗೆ ಸೇವೆ ಸಲ್ಲಿಸಲು ಸಿದ್ಧವಾಗಿದೆ. ಈ ಅಂಶಗಳು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಯಾವ ರೀತಿಯ ಸ್ಪರ್ಧೆಯಿದೆ ಎಂಬುದನ್ನು ಸೂಚಿಸುತ್ತವೆ. ಈ ಬಗ್ಗೆ ಸಹಕಾರ ಸಂಸ್ಥೆಗಳು ಗಂಭೀರ ಗಮನವನ್ನು ಹರಿಸಬೇಕಾಗುತ್ತದೆ. ಆದಷ್ಟು ಬೇಗ ತಂತ್ರಜ್ಞಾನದ ಮೂಲಕ ವ್ಯವಹರಿಸಬೇಕಾಗುತ್ತದೆ. ಸಹಕಾರ ಸಂಸ್ಥೆಗಳನ್ನು...

ನಮ್ಮ ಅಭಿವೃದ್ಧಿಗಾಗಿ, ನಾವೇ ಸ್ಥಾಪಿಸಿಕೊಂಡಿದ್ದೇವೆ. ಸದಸ್ಯರ ಹಿತಾಸಕ್ತಿ ಮತ್ತು ಸಹಕಾರ ಸಂಸ್ಥೆಯ ಅಭಿವೃದ್ಧಿ... ಪ್ರತಿಯೊಂದು ಸಹಕಾರ ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ. ಉತ್ತಮ ಆಡಳಿತವನ್ನು ಪ್ರತಿಯೊಂದು ಸಂಘವೂ ನೀಡಬೇಕಾಗಿರುವುದು... ಆ ಸಹಕಾರ ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ. ಕಡಿಮೆ ಖರ್ಚಿನಲ್ಲಿ, ಕಡಿಮೆ ಸಮಯದಲ್ಲಿ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಹೆಚ್ಚಿನ ಸೇವೆ ನೀಡುವುದು ಉತ್ತಮ ಆಡಳಿತದ ಲಕ್ಷಣ. ಇದು ತಂತ್ರಜ್ಞಾನದ ಅಳವಡಿಕೆಯಿಂದ ಸಾಧ್ಯವಾಗುತ್ತದೆ. ತಂತ್ರಜ್ಞಾನವು ಎಲ್ಲ ಕ್ಷೇತ್ರಗಳನ್ನು ಆವರಿಸಿಕೊಂಡಿದ್ದು... ಸಹಕಾರ ಕ್ಷೇತ್ರದ ಮನಸ್ಥಿತಿ (Mindset) ಬದಲಾಗಬೇಕಾಗಿದೆ. ತಂತ್ರಜ್ಞಾನ ಸಾಕಷ್ಟು ಮುಂದುವರೆದ ಇಂದಿನ ಸಂದರ್ಭದಲ್ಲಿ ಡಿಜಿಟಲ್ ಬ್ಯಾಂಕಿಂಗ್ ಸಹಕಾರ ಕ್ಷೇತ್ರಕ್ಕೆ ಅಗತ್ಯವಾಗಿದೆ. ಈಗ ಅಲ್ಲದಿದ್ದರೂ ಮುಂದಿನ ದಿನಗಳಲ್ಲಾದರೂ... ನಗದು ರಹಿತ ವ್ಯವಸ್ಥೆಗೆ ನಾವು ಒಗ್ಗಿಕೊಳ್ಳದೇ ವಿಧಿಯೇ ಇಲ್ಲ. ನಾವು ಅಪ್‌ಡೇಟೆಡ್ ಆಗದಿದ್ದರೆ... ಔಟ್‌ಡೇಟೆಡ್ ಆಗಿಬಿಡುತ್ತೇವೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳೂ ಸೇರಿದಂತೆ ಸುಮಾರು 40 ಸಾವಿರಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ 5230 ಪ್ಯಾಕ್ಸ್‌ಗಳು, 3271 ಪತ್ತಿನ ಸಂಘಗಳು, 14000 ಹಾಲು ಉತ್ಪಾದಕರ ಸಂಘಗಳು, 3950 ಸೌಹಾರ್ದ ಸಹಕಾರಿಗಳು ಸೇರಿದಂತೆ ಒಟ್ಟು 26,000 ಸಂಘಗಳ ಪೈಕಿ ಸುಮಾರು 23000 ಸಂಘಗಳು ಗ್ರಾಮೀಣ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿವೆ. ಹೆಚ್ಚಿನ ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಈಗಲೂ ಕಂಡುಬರುತ್ತಿದ್ದು, ಹೆಚ್ಚಿನ ಜನರಿಗೆ ಕಂಪ್ಯೂಟರ್ ಜ್ಞಾನ ಕಡಿಮೆಯಿರುವುದರಿಂದ, ಹೆಚ್ಚು ಸಹಕಾರ ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದು, ಡಿಜಿಟಲ್ ಬ್ಯಾಂಕಿಂಗ್ ಅನುಷ್ಠಾನ ಸಾಧ್ಯವೇ? ಎಂಬ ಪ್ರಶ್ನೆ ಮೂಡುವುದು ಸಹಜ. ಇದಕ್ಕೆ ಉತ್ತರ ಕೆಳಕಂಡಂತಿದೆ :

ಗ್ರಾಮೀಣ ಭಾರತದ ಡಿ.ಎನ್.ಎ. ಬದಲಾಗಿದೆ: ಭಾರತ ಬಹುತೇಕ ಕೃಷಿ ಮೂಲದ ಗ್ರಾಮೀಣ ಅರ್ಥವ್ಯವಸ್ಥೆಯನ್ನು ಹೊಂದಿದೆ. ಶೇ.68.84 ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಒಂದು ಅಂದಾಜಿನ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ 2020ರ ಹೊತ್ತಿಗೆ ಅಂತರ್ಜಾಲ ಉಪಯೋಗಿಸುವವರ ಸಂಖ್ಯೆ ಅರ್ಧದಷ್ಟಾಗಲಿದೆ. ಅಂತರ್ಜಾಲ ಸಂಪರ್ಕ ಹೊಂದಿರುವ ಗ್ರಾಮೀಣ ಗ್ರಾಹಕರ ಸಂಖ್ಯೆ 2015ರಲ್ಲಿ 120 ಮಿಲಿಯನ್ ಇದ್ದು, ಅದು 2020ರ ಹೊತ್ತಿಗೆ ಸರಿ ಸುಮಾರು 315 ಮಿಲಿಯನ್‌ಗೆ ಹೆಚ್ಚಲಿದೆ ಎಂದು ನಿರೀಕ್ಷಿಸಲಾಗಿದೆ. ಪ್ರಸ್ತುತ 18 ರಿಂದ 50 ವರ್ಷ ವಯೋಮಾನದ ಸುಮಾರು 160 ಮಿಲಿಯನ್ ಜನರು ಶೇ.30 ರಷ್ಟು ಅಂತರ್ಜಾಲ ಹೊಂದಿದ್ದಾರೆ. ಆಸಕ್ತಿದಾಯಕ ಸಂಗತಿ ಏನೆಂದರೆ ಗ್ರಾಮೀಣ ಪ್ರದೇಶದ ಬೆಳವಣಿಗೆ ಗಮನಾರ್ಹವಾಗಿ ನಗರ ಕೇಂದ್ರಗಳಿಗಿಂತಲೂ ಹೆಚ್ಚಿನ ಬೆಳವಣಿಗೆ ಕಾಣಲಿದೆ ಎಂದು ಹೇಳಲಾಗಿದೆ. ಶೇ.93ಕ್ಕೂ ಹೆಚ್ಚು ಗ್ರಾಮೀಣ ಭಾರತದ ಜನರು ಯಾವುದೇ ಡಿಜಿಟಲ್ ವಹಿವಾಟು ನಡೆಸಿಲ್ಲ. ಆದ್ದರಿಂದ, ಡಿಜಿಟಲ್ ಬ್ಯಾಂಕಿಂಗ್‌ಗೆ ನಿಜವಾದ ಅವಕಾಶವಿರುವುದು ಅಲ್ಲಿಯೆ.

ಗ್ರಾಮೀಣ ಜನರಲ್ಲಿ... ಪಟ್ಟಣಿಗರಿಗೆ ಸರಿಸಮನಾಗಿ ಅಥವಾ ಅವರಿಗಿಂತ ಹೆಚ್ಚು ಕಲಿಯುವ ಆಸಕ್ತಿ ಕಂಡು ಬರುತ್ತಿದೆ. ಗ್ರಾಮೀಣ ಯುವ ಜನತೆ ... ಮಾರುಕಟ್ಟೆ ಹಾಗೂ ವಾಣಿಜ್ಯ ಪೂರಕ ಸೇವೆಗಳಾದ ಕೃಷಿ, ಆರೋಗ್ಯ, ಶಿಕ್ಷಣ, ಚಿಲ್ಲರೆ ವ್ಯಾಪಾರ, ನೀರು, ಇಂಧನ, ಸಂಪರ್ಕ ಮುಂತಾದ ವೃತ್ತಿಗಳನ್ನು ನಿರ್ವಹಿಸಲು ಸಮರ್ಥರಿದ್ದಾರೆ. ಹೆಚ್ಚು-ಹೆಚ್ಚು ಯುವಕ-ಯುವತಿಯರು ಉದ್ಯೋಗದಾತರಾಗಿ... ಅವರ ಜಿಲ್ಲೆಗಳಲ್ಲಿರುವ ಯುವಜನತೆಗೆ ವೃತ್ತಿಯ ಅವಕಾಶಗಳನ್ನು ಕಲ್ಪಿಸಲು ಸಾಧ್ಯವಾಗುವ ವಾತಾವರಣ ಕಂಡುಬರುತ್ತಿದೆ. ಗ್ರಾಮೀಣ ಭಾರತದಲ್ಲಿ ತಾಂತ್ರಿಕತೆಯ ವೇದಿಕೆಯನ್ನು ಕಟ್ಟಲು ವಿಫುಲ ಅವಕಾಶವಿದೆ.

ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ... 1 ಸಾವಿರ ಜನರನ್ನು ಕುರಿತು ನಡೆಸಿದ ಸಮೀಕ್ಷೆಯ ಪ್ರಕಾರ : ಶೇ.53ರಷ್ಟು ಜನರು ಸ್ಮಾರ್ಟ್‌ಫೋನ್ ಹೊಂದಿದ್ದಾರೆ. ಶೇ.73ರಷ್ಟು ಜನರು ಮೊಬೈಲ್‌ನಲ್ಲಿ ಅಂತರ್‌ಜಾಲದ ಸೌಲಭ್ಯ ಪಡೆದುಕೊಂಡಿದ್ದಾರೆ. ಶೇ.90ರಷ್ಟು ಜನರು ಆನ್‌ಲೈನ್ ಶಾಪಿಂಗ್ ಬಗ್ಗೆ ತಿಳಿದುಕೊಂಡಿದ್ದಾರೆ. ಅವರಲ್ಲಿ ಶೇ.47ರಷ್ಟು ಜನರು ಆನ್‌ಲೈನ್ ಮೂಲಕ ವ್ಯವಹರಿಸುತ್ತಿದ್ದಾರೆ. ಸಿರಾ, ನರಗುಂದ ಸೇರಿದಂತೆ ಆರು ಜಿಲ್ಲೆಗಳುದ್ದಕ್ಕೂ 10 ತಾಲ್ಲೂಕುಗಳಲ್ಲಿ ಇಂಟರ್‌ನೆಟ್ ಸಂತೆಗಳನ್ನು ಸಂಘಟಿಸಲಾಗಿದೆ. ಗ್ರಾಮೀಣ ಗ್ರಾಹಕರ ಮನೆಬಾಗಿಲಿಗೆ ಇ-ಕಾಮರ್ಸ್ ಸೇವೆಗಳನ್ನು ಹಾಗೂ ಆರೋಗ್ಯ ಮತ್ತು ಶಿಕ್ಷಣ ಸೌಲಭ್ಯಗಳನ್ನು ತಲುಪಿಸಲು ಸಾಧ್ಯವಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ... ನಗದು ರಹಿತ ಆರ್ಥಿಕ ವ್ಯವಸ್ಥೆಯನ್ನು ಹೊಂದಲು ಸಹಕಾರ ಸಂಸ್ಥೆಗಳಿಗೆ ಪ್ರಾಯೋಗಿಕವಾಗಿ ಯಾವುದೇ ಸಮಸ್ಯೆಯಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸಹಕಾರ ಸಂಸ್ಥೆಗಳು ನಗದು ರಹಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮುನ್ನ: ಯಾವ ವ್ಯವಹಾರಗಳನ್ನು, ಯಾವ ರೀತಿಯ ಸೌಲಭ್ಯಗಳನ್ನು ಬಳಸಿಕೊಂಡು ನಗದು ರಹಿತವಾಗಿ ನಡೆಸಬೇಕು ಎಂಬುದರ ಬಗ್ಗೆ ಸ್ವಲ್ಪ ಮಟ್ಟಿನ ಸ್ಪಷ್ಟತೆ ಹೊಂದುವುದು ಸೂಕ್ತ. ಪ್ರತಿಯೊಬ್ಬ ವ್ಯಕ್ತಿಯ ಹಣಕಾಸು ವ್ಯವಹಾರಗಳು, ಅವುಗಳ ಗಾತ್ರ ಹಾಗೂ ಪುನರಾವರ್ತನೆ, ವ್ಯವಹಾರದ ಸ್ವರೂಪ, ಉದ್ದೇಶಗಳನ್ನು ಆಧರಿಸಿ, ಯಾವ ರೀತಿಯ ಪಾವತಿಗಳನ್ನು ನಗದು ರಹಿತವಾಗಿ ಮಾಡಬೇಕು? ನಗದು ರಹಿತ ವ್ಯವಹಾರಗಳನ್ನು ನಡೆಸಲು ಯಾವ ಖಾತೆಗಳಿಗೆ ಪ್ರತ್ಯೇಕ ಸೌಲಭ್ಯಗಳನ್ನು ಅಳವಡಿಸಿಕೊಳ್ಳಬೇಕು? ನಗದು ರೂಪದಲ್ಲಿ ಪಾವತಿಸಲು ಆಯ್ಕೆ ಮಾಡಿಕೊಂಡಿರುವ ಮಿತಿ ಎಷ್ಟು? (ಉದಾ: ರೂ. ಸಾವಿರಕ್ಕಿಂತ ಹೆಚ್ಚಿನ ಪಾವತಿಗಳನ್ನು ನಗದು ರಹಿತ ಮಾರ್ಗಗಳಲ್ಲಿ ಮಾತ್ರ ಮಾಡುವುದು) ಹಾಗೂ ಎಲ್ಲಾ ರೀತಿಯ ಶುಲ್ಕಗಳು, ತೆರಿಗೆಗಳು, ಶಾಲಾ ಕಾಲೇಜು ಫೀಗಳು, ವಿದ್ಯುತ್, ನೀರು, ವಾಹನ ಇಂಧನಗಳು, ಪ್ರಯಾಣ ಟಿಕೆಟ್‌ಗಳು ಇತ್ಯಾದಿಗಳನ್ನು ನಗದು ರಹಿತ ರೂಪದಲ್ಲಿಯೇ ಮಾಡುವುದು ಮತ್ತು ಅಶಿಕ್ಷಿತರಿಗೆ, ಮನೆಗೆಲಸದವರಿಗೆ, ಸಣ್ಣ ಮೊತ್ತದ ವಹಿವಾಟುಗಳಿಗೆ ನಗದು ಹಣದ ಬಳಕೆ ಮಾಡುವುದು ಇತ್ಯಾದಿ ಅಂಶಗಳಿಗೆ ಸಂಬಂಧಿಸಿದಂತೆ ಸೂಕ್ತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬಹುದಾಗಿದೆ. ಇದರ ಜೊತೆ-ಜೊತೆಗೆ ಸಹಕಾರ ಸಂಸ್ಥೆಗಳ ಆಡಳಿತ ಮಂಡಲಿ ಮತ್ತು ಸಿಬ್ಬಂದಿ ವರ್ಗದವರು ಡಿಜಿಟಲ್ ಬ್ಯಾಂಕಿಂಗ್ ಬಗ್ಗೆ ಪೂರ್ಣ ಅರಿವನ್ನು ಪಡೆದುಕೊಳ್ಳುವುದು ಮುಖ್ಯವಾಗುತ್ತದೆ.

Common Application Software - (C.A.S.) : ಸಹಕಾರ ಸಂಸ್ಥೆಗಳಲ್ಲಿ ಈಗ ಅಳವಡಿಸಿರುವ ತಂತ್ರಜ್ಞಾನ... ಡಿಜಿಟಲ್ ಬ್ಯಾಂಕಿಂಗ್‌ಗೆ ಸಾಕಾಗುವುದಿಲ್ಲ. ಈ ಬಗ್ಗೆ ಹೊಸ ಚಿಂತನೆ ಅಗತ್ಯವಾಗುತ್ತದೆ. ಖರ್ಚನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದೇ ಚಟುವಟಿಕೆಗಳನ್ನು ಹೊಂದಿರುವ ಸಹಕಾರ ಸಂಸ್ಥೆಗಳು Common Application Software ವ್ಯವಸ್ಥೆಯ ಬಗ್ಗೆ ಗಮನಹರಿಸಬಹುದಾಗಿದೆ. CAS ಮೂಲಕ ಕೃಷಿ ಮತ್ತು ಕೃಷಿಯೇತರ ವ್ಯವಹಾರಕ್ಕೆ ಒಂದೇ ಸಾಫ್ಟ್‌ವೇರ್ ಸಾಧ್ಯವಿದೆ. ಇದರಿಂದ Reporting System ಸುಲಭ. ತಾಂತ್ರಿಕ Support, Service, ಮತ್ತು Cost Effective ಸುಲಭವಾಗುತ್ತದೆ. ಹತ್ತಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ಸೇರಿ ಒಂದು ATM ಮಾಡಬಹುದು. Data Perfect ಇದ್ದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಆರ್ಥಿಕ ನೆರವು ಸಾಧ್ಯ.

ಈ ನಿಟ್ಟಿನಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಕಲಂ 26-ಎ ಮತ್ತು 26-ಬಿ ರೀತ್ಯಾ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 14, 15 ಮತ್ತು 16ರ ರೀತ್ಯಾ ಸಹಕಾರ ಸಂಸ್ಥೆಗಳ ಪಾಲುಗಾರಿಕೆ ಮತ್ತು ಸಹಕಾರ ಸಂಸ್ಥೆಗಳಿಂದ ಸಹೋದ್ಯಮ ನಡೆಸಲು ಅವಕಾಶ ಇರುವುದನ್ನು ಸಹಕಾರ ಸಂಸ್ಥೆಗಳು ನಿಯಮಾನುಸಾರ ಉಪಯೋಗಿಸಿ ಕೊಳ್ಳಬಹುದಾಗಿದೆ. ಒಟ್ಟಿನಲ್ಲಿ ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆ ಹೊಂದಿರುವ ಭಾರತದಂತಹ ದೇಶದಲ್ಲಿ ರಾತ್ರೋರಾತ್ರಿ ನಗದು ರಹಿತ ವ್ಯವಸ್ಥೆ ಜಾರಿಗೆ ತರಲು ಸಾಧ್ಯವಿಲ್ಲ. 'ಕ್ಯಾಶ್ ಲೆಸ್' ಬದಲು 'ಲೆಸ್ ಕ್ಯಾಶ್' ವಹಿವಾಟು ಸೂಕ್ತವಾಗಿದೆ. ■

ಗುಣಾತ್ಮಕ ಸಾಲ ನೀಡುವಿಕೆಯಿಂದ ಸಹಕಾರಿ ನಷ್ಟ ತಡೆಯಲು ಸಾಧ್ಯ

▶▶ **ಸುರೇಶ,** ನ್ಯಾಯವಾದಿಗಳು, ಬೆಂಗಳೂರು.

ಸಹಕಾರಿಯ ಆರ್ಥಿಕ ನಷ್ಟವನ್ನು ತಡೆಯಲು ಸಹಕಾರಿಯಿಂದ ಸಾಲವನ್ನು ಕೊಡುವಾಗ ಹಾಗೂ ಸಾಲದ ಹಣವನ್ನು ವಸೂಲಿ ಮಾಡುವ ಬಗ್ಗೆ ಸೂಕ್ತವಾಗಿ ತಿಳಿದುಕೊಳ್ಳುವುದು ಅತ್ಯವಶ್ಯ. ಏಕೆಂದರೆ, ಸಾಲವನ್ನು ನೀಡುವಾಗ ಸಾಲಗಾರನ ಮತ್ತು ಜಾಮೀದಾರರನ್ನು ಮೊದಲು ಸಹಕಾರಿಯ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ಕಾರಣ, ಒಂದುವೇಳೆ ಸದರಿ ಸಾಲದ ಹಣ ಸಹಕಾರಿಗೆ ಮರುಪಾವತಿಯಾಗದಿದ್ದಲ್ಲಿ ಸೌಹಾರ್ದ ಸಹಕಾರಿಗಳ ನ್ಯಾಯಾಲಯದಲ್ಲಿ ಸದಸ್ಯರಲ್ಲದ ಸಾಲಗಾರ ಮತ್ತು ಜಾಮೀನುದಾರನ ವಿರುದ್ಧ ಬಾಕಿ ವಸೂಲಿಗಾಗಿ ದಾವೆ ಹೂಡಲು ಅವಕಾಶವಿರುವುದಿಲ್ಲ. ಆದಕಾರಣ ಸಾಲ ಮಂಜೂರಾತಿಯ ಪೂರ್ವದಲ್ಲೇ ಸಾಲ ತೆಗೆದುಕೊಳ್ಳುವವನಿಗೆ ಮತ್ತು ಜಾಮೀನುದಾರನಿಗೆ ಸದಸ್ಯತ್ವ ನೀಡಬೇಕಾಗುತ್ತದೆ. ಅದೇರೀತಿ ಸಾಲಗಾರನ ಮತ್ತು ಜಾಮೀನುದಾರನ ವಿಳಾಸದ ದಾಖಲಾತಿ ಪಡೆಯುವಾಗ ಎಚ್ಚರ ವಹಿಸಬೇಕು. ಏಕೆಂದರೆ, ಸಹಕಾರಿಯ ನ್ಯಾಯಾಲಯದಿಂದ ಸಾಲಗಾರನ ಮತ್ತು ಜಾಮೀನುದಾರನ ವಿರುದ್ಧ ಡಿಕ್ರಿ ಪಡೆದರೂ ಸಹ ಸದರಿಯವರು ಸಿಗದ ಹೊರತು ಡಿಕ್ರಿ ಜಾರಿ ಮಾಡಲು ಸಾಧ್ಯವಿಲ್ಲ. ಈ ಅಂಶವನ್ನು ಗಮನದಲ್ಲಿರಿಸಿಕೊಂಡು ವಿಳಾಸದ ದಾಖಲಾತಿ ಪಡೆಯಬೇಕೇ ವಿನಹಃ ಕೇವಲ ದಾಖಲಾತಿಗೋಸ್ಕರ ಪಡೆದರೆ ವ್ಯರ್ಥವಾಗುತ್ತದೆ.

ಜಾಮೀನುದಾರರನ್ನು ಒಂದಕ್ಕಿಂತ ಹೆಚ್ಚು ಪಡೆಯುವುದು ಸೂಕ್ತ. ಏಕೆಂದರೆ, ಜಾಮೀನುದಾರರು ಸಾಲದ ಹಣ ಮರುಪಾವತಿ ಮಾಡಲು ಸಾಲಗಾರನ ಜೊತೆ ಜಂಟಿಯಾಗಿ ಹಾಗೂ ಪ್ರತ್ಯೇಕವಾಗಿ ಬಾಧ್ಯನಾಗಿರುತ್ತಾನೆ. ಇದರಿಂದ ಸಾಲ ವಸೂಲಾತಿ ಬಹಳ ಸುಲಭ. ಸಾಲಗಾರನು ಸಿಗದಿದ್ದ ಪಕ್ಷದಲ್ಲಿ ಜಾಮೀನುದಾರನಿಂದ ವಸೂಲಿ ಮಾಡಲು ಅವಕಾಶವಿರುತ್ತದೆ. ಸದಸ್ಯತ್ವ ನೀಡಿ ಸರಿಯಾದ ವಿಳಾಸದ ದಾಖಲಾತಿ ತೆಗೆದುಕೊಂಡು, ಸಹಕಾರಿಯ ಸಾಲದ ಮೊತ್ತವನ್ನು ಸಾಲಗಾರನಿಗೆ ಪಾವತಿ ಮಾಡಿದ ಬಗ್ಗೆ ಪುರಾವೆ ನೀಡಬೇಕಾಗುತ್ತದೆ. ಆದ್ದರಿಂದ, ಸಹಕಾರಿಯ ಬ್ಯಾಂಕ್ ಮುಖಾಂತರ ಸಾಲದ ಹಣ ಪಾವತಿ ಮಾಡಿದರೆ ಸಾಲಗಾರನ ವಿರುದ್ಧ ದಾವಾ ಹಾಕಿದ ಸಂದರ್ಭದಲ್ಲಿ ಸಾಲಗಾರನು ಸಾಲದ ಹಣ ಪಡೆದಿಲ್ಲ ಎಂದು ಹೇಳಿದರೆ ನ್ಯಾಯಾಲಯವು ಅವನ ವಾದವನ್ನು ಪುರಸ್ಕರಿಸುವುದಿಲ್ಲ. ಏಕೆಂದರೆ, ಸಾಲದ ಹಣ ಪಾವತಿ ಮಾಡಿದ ಬಗ್ಗೆ ಬ್ಯಾಂಕ್ ಹೇಳಿಕೆಯನ್ನು ಸಲ್ಲಿಸಿದರೆ ಅವನು ಸಾಲದ ಹಣ ಪಡೆದ ಬಗ್ಗೆ ರುಜುವಾತು ಪಡಿಸಿದಂತಾಗುತ್ತದೆ. ಈ ಕಾರಣಗಳಿಂದ ಸಾಲದ ಹಣ ಪಾವತಿ ಮಾಡುವ ಪೂರ್ವದಲ್ಲಿ ಮೂರು ಸಂಗತಿಗಳ ಬಗ್ಗೆ ಎಚ್ಚರ ವಹಿಸಬೇಕು. ಅಂದರೆ;

1) ಸದಸ್ಯತ್ವ ನೀಡುವುದು.
2) ಸರಿಯಾದ ವಿಳಾಸದ ದಾಖಲೆ ಪಡೆಯುವುದು.
3) ಸಾಲದ ಹಣ ಬ್ಯಾಂಕ್ ಮುಖಾಂತರ ಸಾಲಗಾರನಿಗೆ ಪಾವತಿಸುವುದು.

ಇನ್ನೂ ಸಾಲ ಪಡೆದ ಮೇಲೆ ಸರ್ವಜ್ಞ ಹೇಳಿದಂತೆ "ಸಾಲವನು ಕೊಂಬಾಗಹಾಲೊಗರವನೊಂಬಂತೆ ಸಾಲಿಗನು ಒಂದು ಎಳೆದಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ" ಸಾಲವನ್ನು ಪಡೆದುಕೊಂಡ ಯಾರೇ ವ್ಯಕ್ತಿಯಾಗಲೀ ಸಂತೋಷದಿಂದ ತಾನು ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡುವುದಿಲ್ಲ. ಆದರೆ, ಮರುಪಾವತಿ ಮಾಡಲು ತಪ್ಪಿದರೆ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ ಎಂದು ಮರುಪಾವತಿ ಮಾಡುವವರೇ ಹೆಚ್ಚು ಜನ. ಸುಸ್ಥಿದಾರರಲ್ಲಿ ಎರಡು ರೀತಿಯಾದ ಜನರು ಇದ್ದಾರೆ. ಮೊದಲಿನವರು, ಮರುಪಾವತಿ ಮಾಡಲು ಹಣವಿಲ್ಲದೇ ಸುಸ್ಥಿಯಾಗುತ್ತಾರೆ. ಎರಡನೆಯವರು, ಮರುಪಾವತಿ ಮಾಡಲು ಹಣವಿದ್ದರೂ ಉದ್ದೇಶಪೂರ್ವಕವಾಗಿ ಸುಸ್ಥಿಯಾಗುತ್ತಾರೆ. ಸುಸ್ಥಿಯಾದವರು ಉದ್ದೇಶಪೂರ್ವಕವಾಗಿರಲಿ ಅಥವಾ ಇಲ್ಲದಿರಲಿ ಸುಸ್ಥಿಯಾದ ಸಾಲದ ಹಣವನ್ನು ವಸೂಲಿ ಮಾಡಲು ಸರಿಯಾದ ಸಮಯಕ್ಕೆ ಸರಿಯದ ಕ್ರಮ ಕೈಗೊಳುವುದು ಸಹಕಾರಿಯ ಕರ್ತವ್ಯ. ಇದಕ್ಕೆ ತಪ್ಪಿದ್ದಲ್ಲಿ ಸಹಕಾರಿಯ ಕರ್ತವ್ಯದಲ್ಲಿ ಲೋಪವಾಗುವುದಲ್ಲದೇ ಸಹಕಾರಿಯು ಆರ್ಥಿಕ ನಷ್ಟಕ್ಕೆ ಒಳಗಾಗುತ್ತದೆ.

ಸಹಕಾರಿಯು ಒಂದು ಕಾನೂನುಬದ್ಧ ಸಂಸ್ಥೆಯಾಗಿರುವುದರಿಂದ ಯಾವೊಬ್ಬ ಠೇವಣಿದಾರನಿಗೂ ಠೇವಣಿ ಹಣ ಮರುಪಾವತಿಸುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ, ಸಾಲದ ಹಣ ಸುಸ್ಥಿಯಾಗದ ಯಾವ ಒಂದು ಸಹಕಾರಿಯು ಇಲ್ಲ.

ಸಾಲದ ಹಣ ಪಾವತಿ ಮಾಡುವಾಗ ಜಾಮೀನುದಾರರ ಸಹಿ ತೆಗೆದುಕೊಳ್ಳುವಾಗ ಎಚ್ಚರದಿಂದ ಇರಬೇಕು. ಏಕೆಂದರೆ, ಸಾಲಗಾರನ ವ್ಯವಹಾರದ ಬಗ್ಗೆ ಸಾಲದ ಹಣ ಪಡೆಯುವ ಕಾರಣ ರುಜುವಾತು ಪಡಿಸಬಹುದು. ಆದರೆ, ಜಾಮೀನುದಾರನಿಗೆ ಯಾವುದೇ ಹಣ ನೀಡದ ಕಾರಣ ಅವನ ಸಹಿಯಿಂದಲೇ ಜಾಮೀನುದಾರನಾಗಿದ್ದಾನೆ ಎಂದು ನಿರೂಪಿಸಬೇಕಾಗುತ್ತದೆ. ಆದ್ದರಿಂದ, ಜಾಮೀನುದಾರನ

24ನೇ ಪುಟಕ್ಕೆ...

Team Dynamics

- Dr. Ramesh Kumar, Corporate Trainer

KSSFCL successfully conducted 2 days motivational cum educative outbound program at Nandi Hills on 11-02-2017 and on 12-02-2017 for all the employees and officials.

As a part of the program and with an intention to enhance the spirit of Team building and Team work, sessions on "Team Dynamics" The overall effectiveness of the this sessions was to take the participants from 'I' to "WE" and use the learning in the office environments for smooth and effective function of the office for enhancement of their performance and contribution to the Organization.

What is a Team? : A team is a group of individuals, all working together for a common purpose. The individuals comprising a team ideally should have common goals, common objectives and more or less think on the same lines. Individuals who are not compatible with each other can never form a team. They should have similar if not the same interests, thought processes, attitude, perception and likings. Teams work in an organization is to improve quality, complete projects and change processes. A team must have some components to ensure the success of the project or objective. Each member of the team brings a talent and skill to the table, which contributes to the overall success of the group.

From the one more dimension, Team can also be said to be a group of people with full set of complementary skills required to complete a Goal or task, job or project in the Organization. All the members of the team

1 Operate with a high degree of interdependence
2 Share authority and responsibilities for self management
3 Are accountable for the collective performance and
4 Work toward a common organization's goal and share the rewards.

A team becomes more than just a collection of people when a strong sense of mutual commitment creates synergy, this generating performance greater than the sum of the performance of its individual members.

What is Team Work? : The sum of the efforts undertaken by each team member for the achievement of the team's or Organization's objective is called team work. In other words, team work is the backbone of any team.

Every member in a team has to perform and contribute in his best possible way to achieve a common predefined organization's goal. Individual performances do not count in a team and it is the collective performance of the team workers which matters the most.

One cannot work alone in any organization and thus teams are formed where individuals work together for a common objective. In a team; everyone has to work equally for the maximum output.

Team work is actually the collective effort of each and every team member to achieve their assigned goal. No member can afford to sit back and expect the other member to perform on his behalf. The team members must be committed towards their team as well as their organization to avoid conflicts. Nothing productive comes out of unnecessary conflict and in turn diverts the concentration and focus of the team members. Every member should adopt an adjusting and a flexible attitude. One should consider his team members as a part of his extended family all working together towards a common goal. The team members must be dependent on each other for the best to come out.

What are Basic Characteristics of an Effective Team?

Size and Specialization : Normally, an effective team has a membership not exceeding 8 to 10 persons. The members of the team should be specialized in different areas. Thus, the selection of a team is an extremely important task.

Common Goals and Objectives : That one result, towards which everyone should be oriented. This is the common goal or objective and all should aim for it. But what sort of goals should we set?. It is denoted by the acronym SMART [Short, Measurable, Achievable, Reachable and Time bound]

Leader : The Leader is the first line of defense in any team. Proper Leadership and structure provide focus and direction to the Team.

Roles and Responsibilities : After taking care of the proper Team mix, we must see that each member is very clear about his role and responsibilities. By this, specialization will be protected.

Communications : This is one of the most important characteristics. If communications break down, then there is

mistrust, low morale, and duplication of efforts. So effective communications is a must, through talking, phones, e-mails, letters meetings etc.

Trust : In an effective team, every member has complete trust in the other member. This is also one of the most important factors in an effective team

What are the stages of Team Formation?

Forming : There is a great deal of uncertainty about the group's purpose, structure and leadership. The stage is complete when interpersonal relationship are established and when members have begun to think of themselves as part of a group.

Storming : In the storming stage, a conflict arises because of interpersonal behavior. Additionally there is resistance to group influence and task requirements. Occasionally, groups may split.

Norming : In the norming stage, a single leader emerges and this results in group cohesion. There is now a strong sense of group identity and camaraderie. New group standards and roles are formed for members.

Performing : The performing stage is marked by teamwork, role clarity and task accomplishment. Group energy has moved from moved from getting to know and understand each other to the job of performance.

Conclusions

Group formation is a beneficial but highly dynamic process. The life cycle of teams can often closely resemble various stages in individual development. In order to maintain group effectiveness, individuals should be aware of key stages as well as methods to avoid becoming stuck along

the way. Good leadership skills combined with knowledge of group development will help any group perform at its peak level. Teams, though similar, are different from groups in both scope and composition.

Groups are often small collections of individuals with various skill sets that combine to address a specific issue, whereas teams can be much larger and often consist of people with overlapping abilities working toward a common goal. Many issues that can plague groups can also hinder the efficacy of a team. Problems such as social loafing or groupthink can be avoided by paying careful attention to team member differences and providing clear definitions for roles, expectancy, measurement, and rewards. Because many tasks in today's world have become so complex, groups and teams have become an essential component of an organization's success. The success of the team/group rests within the successful management of its members and making sure all aspects of work are fair for each member and ultimate benefit, growth and development of Organization. ■

ಗುಣಾತ್ಮಕ ಸಾಲ ನೀಡುವಿಕೆಯಿಂದ ಸಹಕಾರಿ ನಷ್ಟ ತಡೆಯಲು ಸಾಧ್ಯ

... 22ನೇ ಪುಟದಿಂದ

ಸಹಿ ಪಡೆಯುವ ಮುನ್ನ ಅವನ ಸಹಿಯಿರುವ ದಾಖಲಾತಿಯನ್ನು ಪಡೆದುಕೊಳ್ಳುವುದು ಸೂಕ್ತ.

ಸಾಲಗಾರನು ನಿಗದಿತ ಸಮಯದೊಳಗೆ ಸಾಲ ಮರುಪಾವತಿ ಮಾಡಲು ತಪ್ಪಿದರೆ, ಸೂಕ್ತ ಸಮಯದಲ್ಲಿ ಸಾಲ ಮರುಪಾವತಿ ಮಾಡಲು ಒತ್ತಾಯದ ನೋಟೀಸನ್ನು ಬರವಣಿಗೆಯಲ್ಲಿ ಸಾಲಗಾರನಿಗೆ ಮತ್ತು ಜಾಮೀನುದಾರನಿಗೆ ನೀಡಬೇಕಾಗುತ್ತದೆ. ನೋಟೀಸ್ ನೀಡದ ತರುವಾಯ ಸಾಲಗಾರ ಮರುಪಾವತಿ ಮಾಡಲು ತಪ್ಪಿದರೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರನ್ವಯ ವಸೂಲಾತಿಗಾಗಿ ಸೌಹಾರ್ದ ಸಹಕಾರಿಗಳ ನ್ಯಾಯಾಲಯದಲ್ಲಿ ಸಾಲಗಾರನ ಮತ್ತು ಜಾಮೀನುದಾರನ ವಿರುದ್ಧ ದಾವೆ ಹೂಡಬೇಕಾಗುತ್ತದೆ. ಆದರೆ, ದಾವೆ ಹೂಡುವ ಹಕ್ಕನ್ನು ಅಧಿನಿಯಮದಡಿಯಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಚಲಾಯಿಸತಕ್ಕದ್ದು, ಇಲ್ಲವಾದಲ್ಲಿ ಸಾಲಗಾರನು ಸಾಲ ಮರುಪಾವತಿ ಮಾಡುವ ಬಾಧ್ಯತೆಯಿದ್ದರೂ ಸಹ ಅವಧಿ ಮುಗಿದ ದಾವಾ ಎಂದು ವಜಾ ಆಗುವ ಸಾಧ್ಯತೆಯಿರುತ್ತದೆ. ಏಕೆಂದರೆ, ಕಾನೂನಿನಲ್ಲಿ ಅವಧಿ ಮುಗಿದ ಮೇಲೂ ದಾವಾ ಸಲ್ಲಿಸಲು ಅವಕಾಶವಿದ್ದರೂ ಸಹ ತಡವಾದುದ್ದಕ್ಕೆ ಸಕಾರಣವನ್ನು ನೀಡಬೇಕಾಗುತ್ತದೆ. ಸಹಕಾರಿಯು ಒಬ್ಬ ವ್ಯಕ್ತಿ ಅಲ್ಲದ ಕಾರಣ ಸಕಾರಣ ನೀಡಲು ಕಷ್ಟವಾಗುತ್ತದೆ. ಇದರಿಂದ ಸಹಕಾರಿಗೆ ಆರ್ಥಿಕ ನಷ್ಟ ಉಂಟಾಗುವುದಲ್ಲದೇ ಸಾಲ ವಸೂಲಾತಿಗೆ ಸರಿಯಾದ ಕ್ರಮವಿಡಲು ತಪ್ಪಿದೆ ಎಂಬ ಆರೋಪಕ್ಕೆ ಗುರಿಯಾಗುತ್ತದೆ. ಆದಕಾರಣ ಯಾರೇ ಸಾಲಗಾರ ಸಾಲ ಮರುಪಾವತಿಸಲು ತಪ್ಪಿದ್ದಲ್ಲಿ ದಾವಾ ಸಲ್ಲಿಸಿ, ಸಾಲಗಾರ ಮತ್ತು ಜಾಮೀನುದಾರನ ವಿರುದ್ಧ ಡಿಕ್ರಿ ಪಡೆದರೆ, ಸದರಿ ಡಿಕ್ರಿಯನ್ನು ಜಾರಿಗೊಳಿಸಲು ಕಾನೂನಿನಲ್ಲಿ 12 ವರ್ಷ ಕಾಲಾವಕಾಶವಿರುತ್ತದೆ. ಸರಿಯಾದ ಸಮಯದಲ್ಲಿ ದಾವಾ ಹೂಡಿ ಸುಸ್ಥಿಯಾದ ಹಣ ವಸೂಲಿ ಮಾಡಿ ಸಹಕಾರಿಯ ಬೆಳವಣಿಗೆಗೆ ಕಾರ್ಯನಿರ್ವಹಿಸುವುದು ಸಹಕಾರಿಯ ಕರ್ತವ್ಯ. ■

ಭಾರತದಲ್ಲಿ ಸ್ತ್ರೀಯ ಸ್ಥಾನಮಾನ ಮತ್ತು ಕಾನೂನಿನಲ್ಲಿರುವ ಸುರಕ್ಷತೆ

ಪಾಲರಾಜ್ ಎ., ಕಿರಿಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ.,

ಸ್ತ್ರೀ ಅಥವಾ ಮಹಿಳೆ ಪದವು ಸಂಸ್ಕೃತದ್ದಾಗಿದ್ದು, ಕನ್ನಡದಲ್ಲಿ ಈ ಪದಕ್ಕೆ ಹೆಣ್ಣು ಎಂಬ ಅರ್ಥವಿದೆ. ಆದಿಯಿಂದಲೂ ಸೃಷ್ಟಿಯ ಮೂಲ ಸ್ತ್ರೀಯಾಗಿದ್ದಾಳೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಅವಳದೇ ಆದ ಗೌರವ, ಸ್ಥಾನಮಾನಗಳು ಇರುವುದನ್ನು ಗುರುತಿಸಬಹುದಾಗಿದೆ. ಸ್ತ್ರೀ–ಅವಿನಾಶಿ, ಸಂಜೀವಿನಿ. ಹೆಣ್ಣು ವಿಶಿಷ್ಟ ಶಕ್ತಿಗಳ ಸಂಗಮ. ಮಮತೆ, ಕರುಣೆ, ವಾತ್ಸಲ್ಯ, ಅಕ್ಕರೆ ಮತ್ತು ಭೂಮಿ ತೂಕದಷ್ಟು ತಾಳ್ಮೆಯುಳ್ಳ ಸ್ತ್ರೀ ಒಂದು ಪ್ರಬಲ ಶಕ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ.

ಮಹಿಳೆಯ ವ್ಯಕ್ತಿತ್ವ ಪುರುಷನ ವ್ಯಕ್ತಿತ್ವಕ್ಕಿಂತ ವಿಭಿನ್ನವಾದದ್ದು. ಮಹಿಳೆಯನ್ನು ಹಿಂದಿನಿಂದಲೂ ಅಬಲೆಯೆಂದೇ ಕಡೆಗಣಿಸ ಲಾಗುತ್ತಿದ್ದು, ಮಾನವರಲ್ಲಿ ಗಂಡು ಅಥವಾ ಹೆಣ್ಣು ಎಂಬ ಜೈವಿಕ ಲಕ್ಷಣಗಳು ವ್ಯಕ್ತಿಯ ಹುಟ್ಟಿನಿಂದಲೇ ನಿರ್ಧಾರವಾಗುತ್ತದೆ. ಸ್ತ್ರೀ ಸಮಾಜದಲ್ಲಿ ಒಬ್ಬ ಅತ್ಯುತ್ತಮ ಸ್ನೇಹಿತೆಯೂ ಆಗಬಲ್ಲಳು. ಯಾವುದೇ ರೀತಿಯ ರಕ್ತ ಸಂಬಂಧವಿಲ್ಲದಿದ್ದಾಗಲೂ ಸ್ನೇಹಿತೆಯಾಗಿ, ಸಾಂತ್ವನ ಮಾಡುವ ಪರಿ, ಆತ್ಮೀಯವಾಗಿ ಪಳಗುವ ರೀತಿ, ಭಾವನೆಗಳನ್ನು ಹಂಚಿಕೊಳ್ಳುವ ವೇಗ, ಇಂತಹ ಅದ್ಭುತವಾದ ಕಲೆಯನ್ನು ಸ್ತ್ರೀ ವರವಾಗಿ ಪಡೆದಿದ್ದಾಳೆ.

ಹುಟ್ಟಿನಿಂದಲೂ ಗಂಡು ಹೆಣ್ಣಿನ ಮೇಲೆ ಅವಲಂಬಿತನಾಗೇ ಇರುತ್ತಾನೆ. ಸ್ತ್ರೀ ಎಲ್ಲವನ್ನೂ ಕೊಡುವುದಷ್ಟೇ, ಆದರೆ ಎಷ್ಟು ಹಿಂತಿರುಗಿ ಪಡೆಯುತ್ತಾಳೆ ಎಂಬುದು ಯುಗ ಯುಗಗಳಿಂದಲೂ ಪ್ರಸ್ತಾಪಿತವಾಗುವುದೇ ಇಲ್ಲ. ಮಡದಿಯಾಗಿ ಗಂಡನ ಜೀವನದಲ್ಲಿ ಎಲ್ಲವನ್ನು ಹಂಚಿಕೊಳ್ಳುವ ಹೆಂಡತಿ ಅಲ್ಲಿಯೂ ತಾಯಾಗಿ, ತಂಗಿಯಾಗಿ, ಅಕ್ಕನಾಗಿ, ಸ್ನೇಹಿತೆಯಾಗಿ ಕೊನೆಗೆ ಹೆಂಡತಿಯಾಗಿ ತನ್ನ ಜೀವನವನ್ನು ಹಂಚಿಕೊಳ್ಳುತ್ತಾಳೆ. ಭಾವನಾತ್ಮಕವಾಗಿ ಹೆಣ್ಣು ಗಂಡಿಗಿಂತಳೂ ಹೆಚ್ಚು ಬಲವುಳ್ಳವಳು. ಅವಳು ಯಾವುದೇ ಸಂದರ್ಭದಲ್ಲಿ ಕೈ ಚೆಲ್ಲಿ ಕುಳಿತುಕೊಳ್ಳುವುದಿಲ್ಲ. ಅವಳ ಮುಂದೆ ಒಂದೇ ಗುರಿ, ತಾನು ಬಿದ್ದಷ್ಟು ಸಲವೂ ಎದ್ದು ಮುಂದೆ ಸಾಗಲೇಬೇಕು, ಗಮ್ಯ ತಲುಪಲೇಬೇಕು ಎಂಬುದು. ಇದೇ ಪುರಷನಿಗೆ ಬಲ ಕೊಡುವ ಅಂಶ. ಪುರುಷ ಮಗುವಾಗಿನಿಂದಲೂ ಸ್ತ್ರೀಯ ಶಕ್ತಿಯನ್ನು ಅವಲಂಬಿಸಿ ಬೆಳೆಯುತ್ತಾನೆ, ದೈಹಿಕವಾಗಿಯೂ ಸಾಮಾಜಿಕವಾಗಿಯೂ ಪುರುಷ ಸ್ತ್ರೀಗೆ ಬೆಂಬಲವಾದರೂ, ಮಾನಸಿಕವಾಗಿ ಸ್ತ್ರೀ ಅಗಾಧ ಶಕ್ತಿವಂತಳು ಮತ್ತು ಪುರುಷನ ಆತ್ಮ ಸ್ಥೈರ್ಯವನ್ನು ಹೆಚ್ಚಿಸುವವಳಾಗಿದ್ದಾಳೆ.

ವೇದ/ ಪುರಾಣ/ ಮಹಾಕಾವ್ಯಗಳಲ್ಲಿ ಸ್ತ್ರೀ : ವೇದಗಳ ಕಾಲದಲ್ಲಿ ಗಾರ್ಗಿ ಮೈತ್ರೈಯಿಯರ ಬೌದ್ಧಿಕ ಸಾಧನೆ ಸ್ಮರಣೀಯವಾದದ್ದು, ಪುರಾಣ ಕಾಲದ "ಆದಿಶಕ್ತಿ" ದುಷ್ಟ ಶಿಕ್ಷಕಿಯಾಗಿ, ಶಿಷ್ಟ ರಕ್ಷಕಿಯಾಗಿ, ಸರ್ವಶಕ್ತಿಯನ್ನು ಮೆರೆದಿರುವುದನ್ನು ಕಾಣಬಹುದಾಗಿದೆ. ಹಿಂದೂ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಕೃತಿಗಳ ರಚನೆಗೆ ಸ್ತ್ರೀ ಕಾರಣೀಭೂತಳಾಗಿದ್ದಾಳೆ. ಹಲವು ಶಾಸ್ತ್ರಗಳಲ್ಲಿ "ಜಗಜನನಿ"ಯೆಂದು ಹೇಳಲಾಗುತ್ತದೆ. ಹಾಗಾಗಿ ಹಿರಿಯರು "ಕಾರ್ಯೇಷು ದಾಸಿ, ಸಲೇಹೇಷು ಮಂತ್ರಿ, ಭೋಜೇಷು ಮಾತ, ಶಯನೇಷು ರಂಭಾ ನಾರಿ ಕ್ಷಮಯಾಧರಿತ್ರಿ" ಎಂದಿದ್ದಾರೆ.

ಮನು ತನ್ನ ಮನುಸ್ಮೃತಿಯಲ್ಲಿ "ಯತ್ರನಾರ್ಯೇಷ್ತು ಪೂಜ್ಯತಾ' ಎಂದಿದ್ದಾನೆ. ವೇದ ಕಾಲದಲ್ಲಿ ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವಿತ್ತು. ಸ್ತ್ರೀಯರು ಬ್ರಹ್ಮವಾದಿನಿಯಾಗಿ ಬ್ರಹ್ಮ ಸಭೆಗಳಲ್ಲಿ ಪುರುಷರ ಸಮಾನವಾಗಿ ವಾದ ಮಾಡುವವರಾಗಿದ್ದರು. ಅಪಾಲಾ, ಲೋಪಮುದ್ರೆ, ಗಾರ್ಗಿ, ಮೈತ್ರೈಯಿ, ಉಬಯಭಾರತಿ ಇತ್ಯಾದಿ ಬೆರಳೆಣಿಕೆ ಸ್ತ್ರೀಯರನ್ನು ಉದಾಹರಣೆಯಾಗಿ ನೀಡಬಹುದು.

ವೇದಕಾಲದಲ್ಲಿ ಸಾಮಾನ್ಯ ವರ್ಗ, ವರ್ಣದ ಮಹಿಳೆಯರ ಸ್ಥಿತಿಗತಿ ಏನಾಗಿತ್ತು ಎಂಬುದರ ಬಗ್ಗೆ ಮಾಹಿತಿ ಇಲ್ಲ. ಭಾರತ ಪರಂಪರೆಯಲ್ಲೂ ಮುಖ್ಯ ದೇವತೆಗಳು ಸ್ತ್ರೀ ದೇವತೆಗಳೇ, "ಶಕ್ತಿಗೆ" ಆದಿದೇವತೆ ಪಾರ್ವತಿ, "ಧನಕ್ಕೆ" ಆದಿ ದೇವತೆ ಲಕ್ಷ್ಮೀ ಮತ್ತು

"ವಿದ್ಯೆಗೆ" ಆದಿ ದೇವತೆ ಸರಸ್ವತಿ. ನಮ್ಮ ದೇಶದಲ್ಲಿ ಎಲ್ಲಾ ನದಿಗಳೂ ಸ್ತ್ರೀ ನದಿಗಳೇ. ಗಂಗಾ, ಕಾವೇರಿ, ಕೃಷ್ಣಾ, ನರ್ಮದಾ, ಅಲಕಾನಂದಾ, ಗೋದಾವರಿ, ತುಂಗಾಭದ್ರಾ ಹೀಗೆ ಎಲ್ಲಾ ನದಿಗಳೂ ಸ್ತ್ರೀಗಳೇ. ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬ ಅಭಿಪ್ರಾಯಕ್ಕೆ ಭಾರತೀಯ ಸಂಸ್ಕೃತಿ ಬದ್ಧವಾಗಿದೆ.

ಸ್ತ್ರೀ ಅಂದು : ಅಹಿಂಸೆ. ತ್ಯಾಗ, ಬಲಿದಾನದ ಮೂಲಕ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರಲ್ಲಿಯೂ ಸನಾತನ ಹಿಂದೂ ಮಹಿಳೆಯ ಚಿತ್ರವೇ ಉಳಿದುಕೊಂಡಿತು. ಹನ್ನೆರಡನೆಯ ಶತಮಾನದ ನಂತರ ಸಾಮೂಹಿಕವಾಗಿ ಮಹಿಳೆಯರು ಹೊರಬಂದು ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ದುಡಿದಂತೆ ಆಧುನಿಕ ಕಾಲದಲ್ಲಿ ಗಾಂಧೀಜಿಯ ಒತ್ತಾಸೆಯಿಂದಲೇ ಮಹಿಳೆಯರು ಮನೆಯ ಹೊಸಿಲು ದಾಟಿ ಹೊರ ಬರಲು, ರಾಷ್ಟ್ರೀಯ ಚಳುವಳಿಯಲ್ಲಿ ತೊಡಗಿಸಿಕೊಳ್ಳುವಂತಾಗಿದೆ ಎಂಬುದು ಹೆಮ್ಮೆಯ ಸಂಗತಿ. ಆದರೆ, ಗಾಂಧೀಜಿಗೆ ಒಂದು ನಿಶ್ಚಿತ ಗುರಿ ಸಾಧನೆಯಲ್ಲಿ ಸ್ತ್ರೀಶಕ್ತಿಯ ಅವಶ್ಯಕತೆ ಕಾಣಿಸಿಕೊಂಡಿರುವುದರಿಂದ ಒತ್ತಾಯಿಸಲಾಯಿತೇ ಹೊರತು ಹೆಣ್ಣಿನ ಉದ್ಧಾರಕ್ಕಾಗಿ ಅಲ್ಲ. ಆಂತರಿಕವಾಗಿ ಗಾಂಧೀಜಿಯಲ್ಲಿ ಸನಾತನ ಸಂಸ್ಕೃತಿಯಲ್ಲಿ ಚೌಕಟ್ಟಿನೊಳಗಿರುವ ಹೆಣ್ಣಿನ ಬಗ್ಗೆ ಗೌರವಗಳಿದ್ದವೇ ಹೊರತು ಚೌಕಟ್ಟಿನಾಚೆಗೆ ಬದುಕಲು ಇಚ್ಛಿಸುವ ಮಹಿಳೆಯರ ಕುರಿತ ಹಾಗೆ ಸದಾಭಿಪ್ರಾಯವಿರಲಿಲ್ಲ.

ಸ್ತ್ರೀ ಇಂದು : ನಮ್ಮ ದೇಶದಲ್ಲಿ ಸ್ವಾತಂತ್ರ್ಯ ನಂತರ ಕೌಟುಂಬಿಕ ಪದ್ಧತಿ, ಸಂಸ್ಕೃತಿ, ಸಂಸ್ಕಾರಗಳು, ಕುಟುಂಬ ನಿರ್ವಹಣೆ, ಆರೈಕೆ ಮಾಡುವ ಜವಾಬ್ದಾರಿ ಅನಾದಿಕಾಲದಿಂದಲೂ ಬಂದಿರುವದರಿಂದ ಸಣ್ಣ ವಯಸ್ಸಿನಿಂದಲೇ ಆಕೆಗೆ ಹಲವಾರು ನೀತಿ ನಿಯಮಗಳು ಕಟ್ಟುಪಾಡುಗಳನ್ನು ಹಾಕಲಾಗುತ್ತಿದೆ. ಮನುಷ್ಯನ ಎಲ್ಲಾ ಚಟುವಟಿಕೆಗಳನ್ನು ಅಂಗಾಂಗಗಳ ಪರಸ್ಪರ ಕಾರ್ಯಾಚರಣೆಯನ್ನು ಅವಲಂಬಿಸಿದ್ದು, ದೇಹ ಮತ್ತು ಮನಸ್ಸಿನ ಹೊಂದಾಣಿಕೆ ಕ್ರಿಯೆಗಳ ಮೂಲಕ ಸಾಧಿಸುತ್ತದೆ.

ಬಹುಪಾಲು ವರ್ತನೆಗಳು ದೇಹದೊಳಗಿನ ಮತ್ತು ಹೊರಗಿನ ಪ್ರೇರಣೆಗಳನ್ನು ಅವಲಂಬಿಸಿದ್ದು, ಸ್ತ್ರೀ ಮನೆಯ ಹೊರಗೆ ಹೋಗಿ ವ್ಯವಹಾರ ನಡೆಸುವುದು ಪುರುಷ ಪ್ರಧಾನ ಸಮಾಜದಲ್ಲಿ ಕಷ್ಟವೇ ಆಗಿತ್ತು. ಕೆಲವು ಧರ್ಮಗಳ ಪ್ರಕಾರ ಸ್ತ್ರೀಯರಿಗೆ ಆತ್ಮವಿಲ್ಲ, ಕೆಲವು ಧರ್ಮಗಳಲ್ಲಿ ಮೋಕ್ಷವಿಲ್ಲ.

ಬೌದ್ಧ ಧರ್ಮದಲ್ಲಿಯೂ ಮೊದಲು ಸ್ತ್ರೀಯರಿಗೆ ಅವಕಾಶವಿರಲಿಲ್ಲ. ಮಹಿಳೆಯರನ್ನೂ ಮುಖ್ಯವಾಗಿ 2 ವರ್ಗವಾಗಿ ನೋಡಬೇಕಾಗುತ್ತೆ. ಒಂದು ಗ್ರಾಮೀಣ ಮಹಿಳೆ, ಇನ್ನೊಂದು ನಗರ ಪ್ರದೇಶ ಮಹಿಳೆ. ಪಾತ್ರ ಮತ್ತು ಜವಾಬ್ದಾರಿಗಳ ನಿರ್ವಹಣೆಯಲ್ಲಿ ಇವರಿಬ್ಬರಲ್ಲಿ ವ್ಯತ್ಯಾಸಗಳಿವೆ. ಶಿಕ್ಷಣದ ಮಟ್ಟ ಮತ್ತು ಕುಟುಂಬದ ಪರಿಸರ, ಇವನ್ನೆಲ್ಲ ಅನುಸರಿಸಿ ಜೀವನವನ್ನು ನೋಡುವ ಮತ್ತು ಅನುಭವಿಸಲು ಇಚ್ಛಿಸುವ ಮನೋಭಾವದಲ್ಲಿ ಇಬ್ಬರಿಗೂ ವ್ಯತ್ಯಾಸವಿದೆ. ಆಧುನಿಕ ಯುಗದ ಸಮಾಜದಲ್ಲಿ ಸ್ತ್ರೀಯನ್ನು ವಿವಿಧ ಹಂತಗಳಲ್ಲಿ ಗುರುತಿಸಬಹುದಾಗಿದೆ.

1. ಕೌಟುಂಬಿಕ ವಲಯ : ಕೌಟುಂಬಿಕ ವಲಯದಲ್ಲಿರುವ ವ್ಯಕ್ತಿಗಳಿಗೆ ಹೆಣ್ಣು ಆಸಕ್ತಿಯ, ಆತ್ಮ ಸಂಗಾತದ ವಿಷಯ. ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಹೆಂಡತಿಯಾಗಿ, ನಾದಿನಿಯಾಗಿ, ಅತ್ತೆಯಾಗಿ, ಅತ್ತಿಗೆಯಾಗಿ, ಗೆಳತಿಯಾಗಿ, ಪ್ರೇಮಿಯಾಗಿ ಆಕೆ ನಿರ್ವಹಿಸುವ ಪಾತ್ರಗಳು ಅದ್ಭುತ, ವರ್ಣಾತೀತ. ಏಕೆಂದರೆ, ಒಬ್ಬ ಸ್ತ್ರೀ ಒಂದು ಸಮುದಾಯವನ್ನು ಸಮರ್ಥವಾಗಿ ಪ್ರತಿನಿಧಿಸುವ ಸಾಮರ್ಥ್ಯವನ್ನು ಹೊಂದಿರುವವಳು. ಕೌಟುಂಬಿಕ ವಲಯದ ಸ್ತ್ರೀ ಕುಟುಂಬದ ಕಟ್ಟುಪಾಡುಗಳಿಗೆ ಒಳಗಾಗಿ ಜೀವನ ನಡೆಸುತ್ತಿದ್ದಾಳೆ. ಭಾರತೀಯ ಸಂಸ್ಕೃತಿಯ ರಾಜಭಾರಿಯಂತಿರುವ ಆಕೆ ತನ್ನ ಕುಟುಂಬಕ್ಕಾಗಿ ಎಲ್ಲವನ್ನೂ ತ್ಯಾಗಮಾಡಲು ಸಿದ್ಧಳಿರುತ್ತಾಳೆ.

2. ಸಾಮಾಜಿಕ ವಲಯ : ಸ್ತ್ರೀ ನಾಲ್ಕು ಗೋಡೆಗಳ ನಡುವೆ ಕಾಲಕಳೆಯುವ ಕಾಲವೀಗ ಕಣ್ಮರೆಯಾಗುತ್ತಿದೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಷ್ಟೇ ಧೀಮಂತಿಕೆಯಿಂದ ಬದುಕಲು ಸಾಧ್ಯವಿದೆಯೆಂದು ಹಲವಾರು ರೀತಿಯ ಸಾಧನೆಗಳನ್ನು ಮಾಡುವುದರ ಮೂಲಕ ತೋರಿಸಿ ಕೊಟ್ಟಿದ್ದಾಳೆ. ಎಲ್ಲಾ ಕ್ಷೇತ್ರದಲ್ಲೂ ಮುನ್ನಡೆಯುತ್ತಾ ಜಗತ್ತಿನ ದೃಷ್ಟಿಯನ್ನು ತನ್ನೆಡೆ ಸೆಳೆದಿದ್ದಾಳೆ. ಪ್ರತಿಭೆ, ಕಲೆ, ಸಾಹಿತ್ಯ, ಸಾಹಸ ಪ್ರವೃತ್ತಿಯಂತಹ ಸಾಧನೆಯಲ್ಲಿ ತೊಡಗಿ ವಿಶ್ವದ ಗೌರವಕ್ಕೆ ಪಾತ್ರಳಾಗಿದ್ದಾಳೆ. ತನ್ನ ಹಲವಾರು ಉತ್ತಮ ಗುಣ ನಡತೆಗಳಿಂದ ಸರ್ವಸಂಪನ್ನಳೆನಿಸಿ ಪೂಜನೀಯಳು ಆಗಿದ್ದಾಳೆ. ಉದಾ: ಸರೋಜಿನಿ ನಾಯ್ಡು, ಕಲ್ಪನಾ ಚಾವ್ಲಾ, ಸುನಿತಾ ವಿಲಿಯಂ, ಮದರ್ ತರೆಸಾ, ಕಿರನ್ ಬೇಡಿ, ಹೀಗೆ ಹಲವಾರು ಮಹಿಳೆಯರನ್ನು ನೆನಪಿಸಿಕೊಳ್ಳಬಹುದು.

ಮಹಿಳೆಗೆ ಕಾನೂನಿನಲ್ಲಿರುವ ಸುರಕ್ಷತೆ, ಸಂವಿಧಾನದಲ್ಲಿರುವ ಅವಕಾಶಗಳು : 21ನೇ ಶತಮಾನದಲ್ಲಿ ಮೂಲಭೂತ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧ ಹಕ್ಕು, ಅಭಿವ್ಯಕ್ತಿಯ ಹಕ್ಕು, ಶಿಕ್ಷಣದ ಹಕ್ಕು, ಸಮಾನತೆಯ ಹಕ್ಕು ಈ ಎಲ್ಲವೂ ಆಕೆಗೆ ತಿಳಿದಿದೆ. ಸಂವಿಧಾನದಲ್ಲಿ ಮಹಿಳೆಗೆ ಮೀಸಲಾತಿಯು ದೊರೆತಿದೆ. ಎಲ್ಲಾ ಮಹಿಳೆಗೂ ತನ್ನ ಹಕ್ಕುಗಳು ಬಗೆಗಿನ ಅರಿವು ಅತೀ ಅಗತ್ಯ, ಅಂತಹ ಅರಿವು ಮಹಿಳೆಯರಲ್ಲಿ ಆತ್ಮ ವಿಶ್ವಾಸವನ್ನು ಹುಟ್ಟು ಹಾಕುತ್ತದೆ.

28ನೇ ಪುಟಕ್ಕೆ...

RBI NEWS – JANUARY 2017

K. Vittal Shetty, Banking Consultant, kohimavittal@Hotmail.com, Mobile:9845699904

Sixth Bi-monthly Monetary Policy Statement, 2016-17 Resolution of the Monetary Policy Committee (MPC), Reserve Bank of India. On the basis of an assessment of the current and evolving macroeconomic situation at its meeting on February 8 2017, the Monetary Policy Committee (MPC) decided to:

- keep the policy repo rate under the liquidity adjustment facility (LAF) unchanged at 6.25 per cent.

Consequently, the reverse repo rate under the LAF remains unchanged at 5.75 per cent, and the marginal standing facility (MSF) rate and the Bank Rate at 6.75 per cent.

The decision of the MPC is consistent with a neutral stance of monetary policy in consonance with the objective of achieving consumer price index (CPI) inflation at 5 per cent by Q4 of 2016-17 and the medium-term target of 4 per cent within a band of +/- 2 per cent, while supporting growth. The main considerations underlying the decision are set out in the statement below.

The next meeting of the MPC is scheduled on April 5 and 6, 2017.

IMPORTANT NEWS : Ujjivan Small Finance Bank Limited commences operations

Ujjivan Financial Services Private Limited, Bengaluru was one of the ten applicants which were issued in-principle approval for setting up a small finance bank, as announced in the press release on September 16, 2015.

Pradhan Mantri Garib Kalyan Deposit Scheme (PMGKDS), 2016

Government of India has decided to allow declarants to make deposits on one or more occasions in the PMGKDS, 2016. Accordingly, para 4 (4) of the notification stands amended as under:

"4. Subscription and Mode of investment in the Bonds Ledger Account — (4) The deposit to be made under sub-section (1) of section 199F under this Scheme shall be made, on one or more occasions. The deposits shall be made before filing declaration under sub-section (1) of section 199C."

Removal of limits on withdrawal of cash from Saving Bank Accounts

In line with the pace of remonetisation, it has now been decided to remove the restrictions on cash withdrawals from Saving Bank accounts (including accounts opened under PMJDY) in a two step process as under:

i. Effective February 20, 2017, the limits on cash withdrawals from the Savings Bank accounts will be enhanced to ₹ 50,000 per week (from the current limit of ₹ 24,000 per week); and
ii. Effective March 13, 2017, there will be no limits on cash withdrawals from Savings Bank accounts.

Reserve Bank of India seeks Comments on Draft Circular on Rationalisation of Merchant Discount Rate (MDR) for Debit Card Transactions

- Directions, Withdrwals, Penalties & Cancelleation of Licences of Urban Co-operative Banks.
- Directions under Section 35A of the Banking Regulation Act, 1949 (AACS) – The R S Co-operative Bank Ltd., Mumbai, Maharashtra.
- RBI cancels the Licence of the Shri Chatrapati Urban Co-operative Bank Ltd., Pimple Nilakh, Pune, Maharashtra.
- Cancellation of licence to carry on banking business in India and conversion of Urban Co-operative Bank into a Co-operative Society – The State Transport Employees Co-operative Bank Ltd., Ahmedabad (Gujarat).
- Directions under Section 35A of the Banking Regulation Act, 1949 (AACS) – Lokseva Sahakari Bank Ltd., Pune, Maharashtra.
- Catholic Co-operative Urban Bank Ltd., Hyderabad, Telangana – Penalised.
- Cancellation of licence and conversion of Urban Co-operative Bank into a Co-operative Society under Banking Regulation Act, 1949 (AACS) – The Sojitra Co-operative Bank Ltd., Dist. Anand (Gujarat).
- RBI imposes penaltyof ₹ 2.00 lakh (Rupees Two Lakh only) on Janata Urban Co-operative Bank Ltd., Wai, District Satara.
- RBI extends Directions issued to Rupee Co-operative Bank Ltd., Pune.
- RBI imposes penalty on SahebraoDeshmukh Co-operative Bank Ltd., Mumbai.
- RBI imposes penaltyof ₹ 4.00 lakh (Rupees Four lakh only) on Progressive Co-operative Bank Ltd., Mumbai.
- RBI imposes penaltyof ₹ 1.00 lakh (Rupees One lakh only) on Kaujalgi Urban Cooperative Credit Bank Ltd., Koujalgi, Karnataka.
- Directions under Section 35A of the Banking Regulation Act, 1949 (AACS) – Maratha Sahakari Bank Ltd., Mumbai, Maharashtra.

Source: www.rbi.org.in

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 28

...26ನೇ ಪುಟದಿಂದ

- ಮಹಿಳೆಯರಿಗೆ ಸಾಮಾಜಿಕ ನ್ಯಾಯ ಒದಗಿಸಲು ಕುಟುಂಬ ನ್ಯಾಯಾಲಯ ಕಾಯಿದೆ–1984ರ ಪ್ರಕಾರ "ಕುಟುಂಬ ನ್ಯಾಯಾಲಯ"ವನ್ನು ಸ್ಥಾಪಿಸಲಾಗಿದೆ.
- ಸಮಾಜ ಕಲ್ಯಾಣ ಇಲಾಖೆಯು ಮಹಿಳೆಯರ ಸಮಸ್ಯೆಯನ್ನು ಮತ್ತು ಅದಕ್ಕೆ ಪರಿಹಾರವನ್ನು ಒದಗಿಸುವ ಸಲುವಾಗಿ "ಮಹಿಳಾ ಬ್ಯೂರೋ"ವನ್ನು (women's bureau) ಸ್ಥಾಪಿಸಿ, ಕಾರ್ಯನಿರ್ವಹಿಸುತ್ತಿದೆ.
- ಸಂವಿಧಾನದಲ್ಲಿ ಮಹಿಳೆಯರೂ ಸೇರಿದಂತೆ ತನ್ನ ಎಲ್ಲಾ ಪ್ರಜೆಗಳಿಗೆ ಸಮಾನತೆಯ ಭರವಸೆ. (Article –14)
- ಸಂವಿಧಾನದಲ್ಲಿ ಯಾವುದೇ ತಾರತಮ್ಯ, ಜಾತಿ, ವರ್ಗ, ಮತ, ಲಿಂಗ, ಹುಟ್ಟಿದ ಸ್ಥಳ ಅಥವಾ ಪ್ರದೇಶದ ಆಧಾರದ ಮೇಲೆ ಯಾವುದೇ ನಾಗರೀಕನನ್ನು ಶೋಷಣೆ ಮಾಡುವಂತಿಲ್ಲ. (Article -15(1))
- ರಾಜ್ಯಗಳು ಮಹಿಳೆ ಮತ್ತು ಮಕ್ಕಳ ರಕ್ಷಣೆಗಾಗಿ ಮತ್ತು ಅಭಿವೃದ್ಧಿಗಾಗಿ ತನ್ನದೇ ಆದ ವಿಶೇಷ ವ್ಯವಸ್ಥೆಯನ್ನು ರೂಪಿಸಿ ಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. (Article- 15(3))
- ಯಾವುದೇ ರಾಜ್ಯವು ಮಹಿಳೆಯೂ ಸೇರಿದಂತೆ ಯಾವುದೇ ನಾಗರೀಕನಿಗೆ ನೌಕರಿ ನೀಡುವಲ್ಲಿ ತಾರತಮ್ಮ ಮಾಡುವಂತಿಲ್ಲ. (Article-16)
- ಜನಸಾಮಾನ್ಯರಿಗೆ ಮೂಲಭೂತ ಅವ್ಯಶಕತೆಗಳನ್ನು ನೀಡುವಲ್ಲಿ ಮತ್ತು ನಿಯಮಗಳನ್ನು ರೂಪಿಸುವಲ್ಲಿ ಹೆಣ್ಣು ಮತ್ತು ಗಂಡೆಂಬ ತಾರತಮ್ಯ ಮಾಡುವಂತಿಲ್ಲ. (Article 39(a))
- ಹಿಂದೂ ವಿವಾಹ ಕಾಯಿದೆ, 1955 – ಹೆಣ್ಣು ಮಕ್ಕಳ ಬಾಲ್ಯ ವಿವಾಹವನ್ನು ತಡೆಗಟ್ಟಲು ಮತ್ತು ಮಹಿಳೆಯರ ಮರುವಿವಾಹವಾಗಲು ಮತ್ತು ವಿಚ್ಛೇದನ ನೀಡಲು ಸಮಾನ ಅವಕಾಶ ಕಲ್ಪಿಸಲಾಗಿದೆ.
- ಹಿಂದೂ ಉತ್ತರಾಧಿಕಾರ ಕಾಯಿದೆ, 1956 – ಯಾವುದೇ ಮಹಿಳೆಗೆ ತನ್ನ ಪೋಷಕರ ಆಸ್ತಿಯ ಹಕ್ಕನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.
- ಹಿಂದೂ ದತ್ತು ಮತ್ತು ನಿರ್ವಹಣಾ ಕಾಯಿದೆ, 1956 – ಮಕ್ಕಳು ರಹಿತ ಮಹಿಳೆಯು ಮಗುವನ್ನು ದತ್ತು ತೆಗೆದುಕೊಳ್ಳಲು ಮತ್ತು ವಿಚ್ಛೇದನವಾದಲ್ಲಿ ಗಂಡನಿಂದ ಉಪದಾನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.
- ಮಹಿಳೆಯ ಅನೈತಿಕ ಸಂಚಾರ ನಿಗ್ರಹ ಮತ್ತು ಬಾಲಕಿರ ಕಾಯಿದೆ, 1956 – ವ್ಯಭಿಚಾರಕ್ಕೆ ತಳ್ಳಲ್ಪಟ್ಟ ಮಹಿಳೆ ಮತ್ತು ಅಪಹರಣ/ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರ ಸಂರಕ್ಷಣೆ ಮತ್ತು ಸುರಕ್ಷತೆಗೆ ಅವಕಾಶ ಕಲ್ಪಿಸಲಾಗಿದೆ.
- ವರದಕ್ಷಿಣೆ ನಿಷೇದ ಕಾಯಿದೆ, 1961 – ಮದುವೆಗೆ/ ಮದುವೆಯ ನಂತರ ವರದಕ್ಷಿಣೆ ಪಡೆಯುವುದು, ಮದುವೆ ನಂತರ ಮಹಿಳೆಗೆ ಕಿರುಕುಳ ನೀಡುವುದನ್ನು ತಡೆಗಟ್ಟುವುದು.
- ಪ್ರಸೂತಿ ಸೌಲಭ್ಯ ಕಾಯಿದೆ, 1961 – ಯಾವುದೇ ಮಹಿಳಾ ನೌಕರಳು ಪ್ರಸೂತಿಯ ಸಂದರ್ಭದಲ್ಲಿ 3 ತಿಂಗಳ ವೇತನ ಸಹಿತ ರಜೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.
- ಸಮಾನ ವೇತನ ಕಾಯಿದೆ, 1976 – ನೌಕರಿಯಲ್ಲಿ ಹೆಣ್ಣು ಮತ್ತು ಗಂಡಿಗೆ ಸಮಾನ ವೇತನಕ್ಕೆ ಅವಕಾಶ ಕಲ್ಪಿಸಲಾಗಿದೆ, ವೇತನದಲ್ಲಿ ಯಾವುದೇ ತಾರತಮ್ಯ ಮಾಡುವಂತಿಲ್ಲ.
- ಕಾರ್ಖಾನೆಗಳ ತಿದ್ದುಪಡಿ ಕಾಯಿದೆ, 1976 – ಕಾರ್ಯ ನಿರ್ವಹಣಾ ನಿಯಮಗಳು, ವಾರದ ರಜೆ, ನಿರ್ದಿಷ್ಟ ಕಛೇರಿ ಸ್ವಚ್ಛತೆ, ಉತ್ತಮ ಗಾಳಿ, ಬೆಳಕು, ಪ್ರಾಥಮಿಕ ಚಿಕಿತ್ಸಾ ವ್ಯವಸ್ಥೆ, ವಿಹಾರ ಕೊಠಡಿ, 30ಕ್ಕಿಂತ ಹೆಚ್ಚು ಮಹಿಳೆ ಕಾರ್ಯನಿರ್ವಹಿಸಿದ್ದಲ್ಲಿ ಶಿಶು ವಿಹಾರ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ಒದಗಿಸಲು ಅವಕಾಶ ಕಲ್ಪಿಸಲಾಗಿದೆ ಮತ್ತು ಹೆಚ್ಚೆಂದರೆ ಪ್ರತಿ ದಿನ 9 ಗಂಟೆಗಳ ಕಾಲ ಕೆಲಸ ನಿರ್ವಹಿಸಿಕೊಳ್ಳಲು ಮತ್ತು ಮಹಿಳೆಯರನ್ನು ರಾತ್ರಿ 10 ರಿಂದ ಬೆಳಿಗ್ಗೆ 5ರವರೆಗೆ ಮಹಿಳೆಯರಿಂದ ಕೆಲಸ ಮಾಡಿಸಿಕೊಳ್ಳುವುದನ್ನು ನಿಷೇಧಿಸಿದೆ.
- Medical Termination of Pregnancy Act, 1971– ಮಹಿಳೆಯ ಶಾರೀರಿಕ ಮತ್ತು ದೈಹಿಕ ಆರೋಗ್ಯಕ್ಕಾಗಿ ಕಾನೂನಿನ ಪ್ರಕಾರ ಗರ್ಭಪಾತ ಮಾಡಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010